www.divinegen.org
www.dgmbethelchurch.org

ದೇವರ ಸ್ವರ
ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ - 9 ಸಂಚಿಕೆ - 11 ನವಂಬರ್ 2013
Volume : IX Issue : XI November 2013

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

ಒಳ ಪುಟಗಳಲ್ಲಿ

1. ಪ್ರಕಟಣೆ
2. ಭಕ್ತರ ಹೇಳಿಕೆಗಳು
3. ಯೌವನಸ್ವರ
4. ಹಿಡಿದುಕೊ
5. ಸ್ಥಳೀಯ ಮತ್ತು ವಿದೇಶ ಸುದ್ಧಿ
6. ಕಿಸ್ತನ ಪ್ರಕಾಶವನ್ನು ಹೊಂದಿಕೋ
7. ಪ್ರಾರ್ಥನಾ ಮನವಿಗಳು
8. ನೀತಿವಂತನ ಆಶೀರ್ವಾದಗಳು
9. ಪ್ರಾರ್ಥನಾ ಸ್ವರ
10. ಮಹಿಳೆಯರ ಸ್ವರ
11. ಆರೋಗ್ಯ ಸ್ವರ
12. ಡಿಜಿಎಮ್ ಬೇತೇಲ್ ಅಂಕಣ
13. ಜಾಹೀರಾತು
14. ಮಕ್ಕಳ ಸ್ವರ

# ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಪರಿಶುದ್ಧವಾದ ನಾಮದಲ್ಲಿ ಕ್ರಿಸ್ತನಲ್ಲಿ ಪ್ರೀತಿಯ ಸಹೋದರ/ಸಹೋದರಿಯರೆಲ್ಲರಿಗೂ ನನ್ನ ವಂದನೆಗಳು.

ಈ ವರ್ಷ ಪೂರ್ತಿಗೆ ಒಂದೇ ಒಂದು ತಿಂಗಳು ಮಾತ್ರ ಬಾಕಿ ಇದೆ. ದೇವರ ಸ್ವರ ಮಾಸಪತ್ರಿಕೆಯ ಮೂಲಕವಾಗಿ ಅನೇಕರು ತಮ್ಮ ಜೀವಿತದಲ್ಲಿ ಆಶೀರ್ವಾದ, ಬಿಡುಗಡೆ ಹಾಗೂ ಅದ್ಭುತಗಳನ್ನು ಹೊಂದಿಕೊಂಡಿದ್ದಾರೆಂದು ತಿಳಿಸಲು ಸಂತೋಷವುಳ್ಳವನಾಗಿದ್ದೇನೆ. **"ನನ್ನ ಮನವೇ, ಯೆಹೋವನನ್ನು ಕೊಂಡಾಡು; ನನ್ನ ಸರ್ವೇಂದ್ರಿಯಗಳೇ, ಆತನ ಪವಿತ್ರನಾಮವನ್ನು ಕೀರ್ತಿಸಿರಿ. ನನ್ನ ಮನವೇ, ಯೆಹೋವನನ್ನು ಕೊಂಡಾಡು; ಆತನ ಉಪಕಾರಗಳಲ್ಲಿ ಒಂದನ್ನೂ ಮರೆಯಬೇಡ"** (ಕೀರ್ತ. 103:1–2). ಸತ್ಯವೇದದಲ್ಲಿ ದೇವರ ಸ್ವರವನ್ನು ಕೇಳಿದ ಅನೇಕ ವ್ಯಕ್ತಿಗಳನ್ನು ತಿಳಿದುಕೊಂಡಿರುತ್ತೇವೆ. ಯಾರೆಲ್ಲ ದೇವರ ಸ್ವರ ಕೇಳಿ ಅನುಸರಿಸಿದರೋ ಅವರೆಲ್ಲರೂ ಆಶೀರ್ವದಿಸಲ್ಪಟ್ಟರು. 1 ಸಮು. 3:1 ಸಮುವೇಲನ ಕುರಿತಾಗಿ ಓದುತ್ತೇವೆ. ದೇವರು ಆತನ ಜೊತೆಯಲ್ಲಿ ಸ್ಪಷ್ಟವಾಗಿ ಮಾತನಾಡಿದನು. ದೇವರ ಸ್ವರವನ್ನು ಕೇಳಲು ಅಭ್ಯಾಸ ಮಾಡಿದ ಸಮುವೇಲನು ಒಂದು ದಿನ ಶ್ರೇಷ್ಠ ಪ್ರವಾದಿಯಾಗಿ ಮಾರ್ಪಟನು. 2 ಸಮು. 3:19–21 ಅದೇ ರೀತಿಯಲ್ಲಿ ವಿಮೋ. 3:1 ವಾಕ್ಯದಿಂದ ಮೋಶೆಯೊಂದಿಗೆ ದೇವರು ಹೋರೇಬ್ ಬೆಟ್ಟದಲ್ಲಿ ಮಾತನಾಡಿದನು. ಅದನ್ನು ಕೇಳಿದ ಮೋಶೆ ನಾಯಕನಾಗಿ ಬದಲಾದನು. ಆದಿ. 12:1–3, 13:14–17, 15:1, 17:1, 18:1, 22–1 ಹೀಗೆ ಅಬ್ರಹಾಮನು ದೇವರ ಸ್ವರವನ್ನು ಕೇಳಿದನು. ಒಂದು ಜನಾಂಗದ ತಂದೆಯಾಗಿ ಬದಲಾದನು. ಇಂದು ನಾನು ಮತ್ತು ನೀವು ದೇವರ ಸ್ವರ ಕೇಳಿ ವಿಧೇಯರಾದರೆ ಅನುಗ್ರಹಿಸಲ್ಪಟ್ಟ ಜೀವಿತವನ್ನು ನಾವು ಈ ಲೋಕದಲ್ಲಿ ಜೀವಿಸಬಹುದು. ಯೇಸುಕ್ರಿಸ್ತನು ಹೇಳಿದ್ದಾನೆ, ಆ ಮೇಲೆ ತೋಮನಿಗೆ ನಿನ್ನ ಬೆರಳನ್ನು ಈ ಕಡೆ ಚಾಚಿ ನನ್ನ ಕೈಗಳನ್ನು ಮುಟ್ಟಿ ನೋಡು; ನಿನ್ನ ಕೈಚಾಚಿ ನನ್ನ ಪಕ್ಕೆಯಲ್ಲಿ ಹಾಕು; ನಂಬದವನಾಗಿರಬೇಡ, ನಂಬುವವನಾಗು ಎಂದು ಹೇಳಿದನು (ಯೋಹಾ. 20:27). ದೇವರ ವಾಕ್ಯದ ಮೂಲಕ ಕರ್ತನಾದ ಯೇಸು ಒಂದು ಮಾತು ಹೇಳಿದ್ದಾನೆ, ಯೋಹಾ. 9:4 ಹಗಲು ಅಂದರೆ ಜೀವ ಇರುವ ಸಮಯ, ಆರೋಗ್ಯ ಇರುವ ಸಮಯ, ಅನುಕೂಲಕರ ಸಮಯ ಈ ಸಮಯದಲ್ಲಿ ನಾವು ದೇವರ ಸ್ವರವನ್ನು ಕೇಳೋಣ. **ನನ್ನ ಕುರಿಗಳು ನನ್ನ ಸ್ವರಕ್ಕೆ ಕಿವಿಗೊಡುತ್ತವೆ.....** (ಯೋಹಾ 10:27)

ಕರ್ತನು ನಿಮ್ಮನ್ನು ಆಶೀರ್ವದಿಸಲಿ.

*ಹಿರಿಯ ಸಂಪಾದಕ*

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಪುನಃ ನಾವು ಹಿಂದಿನ ವಿಷಯಕ್ಕೆ ಬರೋಣ ಪ್ರಕ. 2:7 ವಚನಕ್ಕೆ ಆದಾಮನ ಭೂಪರದೇಸವನ್ನು ನಷ್ಟಪಡಿಸಿದ ಮನುಷ್ಯನಿಗೆ ನಿತ್ಯಪರದೈಸನ್ನು ದೇವರು ಕೊಡುತ್ತಾನೆ.

**ಜೀವವೃಕ್ಷ:** ಆದಿಕಾಂಡದಲ್ಲಿದದ್ದು ಮತ್ತು ಪ್ರಕಟಣೆಯಲ್ಲಿರುವಂತ ಇದು ಒಂದೇ ಆಗಿದೆ. ವೃಕ್ಷಗಳು ಮನುಷ್ಯರಿಗೆ ಗುರುತಾಗಿದೆ (ಅರ. 24:6, ಕೀರ್ತ. 1:1–6). ಜೀವವೃಕ್ಷ ಜೀವನಕ್ಕೆ ಮೂಲವಾದ ಕ್ರಿಸ್ತನಿಗೆ ಗುರುತಾಗಿದೆ. ಏದೇನ್ ತೋಟದಲ್ಲಿ 2 ವೃಕ್ಷಗಳಿದ್ದವು (ಆದಿ. 9:15–16).

1. ಜೀವದಾಯಕ ವೃಕ್ಷ
2. ಒಳ್ಳೇದರ ಕೆಟ್ಟದ್ದರ ಅರುಹನ್ನು ಉಂಟು ಮಾಡುವ ವೃಕ್ಷ.

ಜೀವ ವೃಕ್ಷದ ಫಲವನ್ನು ದಿನಾಲೂ ತಿನ್ನುತ್ತಿದ್ದದ್ದರಿಂದ ಅವರಿಗೆ ಜೀವ ಬರುತ್ತಿತ್ತು. ಯಾವಾಗ ಒಳ್ಳೇದರ ಕೆಟ್ಟದ್ದರ ಅರುಹನ್ನು ಉಂಟುಮಾಡುವ ಮರದ ಹಣ್ಣನ್ನು ತಿಂದರೋ ಆಗ ಪಾಪಿಗಳಾದರು ಮಾತ್ರವಲ್ಲದೆ ಆತ್ಮದಲ್ಲಿ ಸತ್ತು ದೇವರ ಜೀವವನ್ನು ಕಳೆದುಕೊಂಡರು.

**ಜೀವವೃಕ್ಷ ಕರ್ತನಾದ ಯೇಸುಕ್ರಿಸ್ತನು:** (ಯೋಹಾ. 6:8–51–58, 8:58, 1 ಯೋಹಾ. 5:11–13). ಜೀವವೃಕ್ಷ ಒಬ್ಬ ವ್ಯಕ್ತಿಯಾಗಿದ್ದರೆ ಒಳ್ಳೇದರ ಕೆಟ್ಟದ್ದರ ಅರುಹನ್ನು ಉಂಟುಮಾಡುವ ವೃಕ್ಷಕೂಡ ಒಬ್ಬ ವ್ಯಕ್ತಿಯಾಗಿದ್ದಾನೆ.

ಯೆಹೆ. 28:13 ರಲ್ಲಿ ಈ ಎರಡು ವೃಕ್ಷಗಳು ಒಟ್ಟೊಟ್ಟಿಗೆ ಏದೇನ್ ತೋಟದಲ್ಲಿತ್ತು. ಹೀಗೆ ಜೀವವೃಕ್ಷದ ಫಲವನ್ನು ಅನುಭವಿಸದೆ ತೋಟದಿಂದ ದೂಡಲ್ಪಟ್ಟರು. ಆದರೆ ಕಡೇ ಆದಾಮನಾದ ಕ್ರಿಸ್ತನು ಇವುಗಳ ಮೇಲೆ ಜಯಹೊಂದಿದನು ಮತ್ತು ಜಯಹೊಂದುವ ಪ್ರತಿಯೊಬ್ಬರಿಗೂ ಈ ಹಣ್ಣನ್ನು ತಿನ್ನಲು ಕೊಡುವನು.

**ಸ್ಮುರ್ನ ಸಭೆ :** ಇದು ಕಿರೀಟಧಾರಿಯಾದ ಸಭೆಯಾಗಿದೆ (ಪ್ರಕ. 2:8–11).

**ಸ್ಮುರ್ನ ಅಂದರೆ :** ಕಹಿತನ, ಕಷ್ಟತೆ.

**ಸಭಾಕಾಲ :** ನೀರೋ ಚಕ್ರವರ್ತಿಯ ಕಾಲದಿಂದ ಕ್ರಿ.ಶ. 300ರ ತನಕ. ಕ್ರಿ.ಶ 170ರಿಂದ – ಕ್ರಿ.ಶ. 313ರವರೆಗೆ.

**ಅನುಭವ :** ಪೀಡೆಯ ಕಾಲ ದುರುಪದೇಶಗಳು. ಈಗಲೂ ಲೋಕದಲ್ಲಿ ಸಭೆಯು ಹಿಂಸೆ ಮತ್ತು ದುರಪದೇಶಗಳಿಂದ ತತ್ತರಿಸುತ್ತಿರುವುದನ್ನು ಕಾಣಬಹುದು.

**ಸಾಮ್ಯ:** ಕಳೆ ಬಿತ್ತುವ ಸಾಮ್ಯ (ಮತ್ತಾ. 13:1).

**ಸ್ಮುರ್ನ ಪಟ್ಟಣ:** ಏಷ್ಯಾ ಮೈನಾರಿನ ಪಶ್ಚಿಮ ತೀರದಲ್ಲಿದ್ದ ಪಟ್ಟಣ ಎಫೆಸ ಪಟ್ಟಣದಿಂದ 50 ಮೈಲಿ ಉತ್ತರ ದಕ್ಷಿಣವಾಗಿದೆ. ಈ ಪಟ್ಟಣದ ಇನ್ನೊಂದು ಹೆಸರು ಏಷ್ಯಾದ ಕಿರೀಟ. ಸ್ಮುರ್ನ ಒಂದು ಬಂದರು ಪಟ್ಟಣವಾಗಿದೆ. ಒಂದನೇ ಶತಮಾನದಲ್ಲಿ ಕೈಸರ್ ಎಂಬ ಚಕ್ರವರ್ತಿ ಒಂದು ಕ್ಷೇತ್ರ ಮತ್ತು ಆರಾಧನೆ ನಡೆಸುತ್ತಿದ್ದರು. ಇಲ್ಲಿಂದಲೇ ಚಕ್ರವರ್ತಿ ಆರಾಧನೆ ಆರಂಭವಾಯಿತು. ಇಂದು ಈ ಪಟ್ಟಣ ಟರ್ಕಿ ದೇಶದ ಇಸ್ಮಾಯಿರ್ ಪಟ್ಟಣವಾಗಿದೆ. ಟರ್ಕಿ ದೇಶದ 3ನೇ ದೊಡ್ಡ ಬಂದರು ಪಟ್ಟಣವಾಗಿದೆ. ಒಂದು ಶ್ರೀಮಂತ ಪಟ್ಟಣವಾಗಿದೆ.

**ಸ್ಮುರ್ನ ಎಂಬ ಪದದ ಅರ್ಥ :** ಮಿರಾ (Myrrh) ಅಂದರೆ ಕಹಿ ಎಂದು. ರಕ್ತಬೋಳ ಎಂಬ ವಸ್ತುವಿನ ಮೂಲಪದ ಮಿರಾ ಆಗಿದೆ. ರಕ್ತಬೋಳವು ಸ್ಮುರ್ನ ಪಟ್ಟಣದಲ್ಲಿ ರಫ್ತು ಮಾಡುವ ಸ್ಥಳವಾಗಿತ್ತು. ಇದು ಸ್ಮುರ್ನದ ವಿಶ್ವಾಸಿಗಳ ಕಹಿಯಾದ ಅನುಭವವನ್ನು ಸೂಚಿಸುತ್ತದೆ. ಪೋಲಿಕಾರ್ಪ ಎಂಬವರು ಈ ಪಟ್ಟಣದ ಸಭೆಯ ಸಭಾಪಾಲಕರಾಗಿದ್ದರು. ಅವರು ಸ್ಮುರ್ನದಲ್ಲಿ ರಕ್ತ ಸಾಕ್ಷಿಯಾಗಿ ಸತ್ತರು. ಸ್ಮುರ್ನದಲ್ಲಿ ಕೈಸರನನ್ನು ದೇವರೆಂದು ಅಂಗೀಕರಿಸದವರನ್ನು ಮತ್ತು ಕರ್ತನಾದ ಯೇಸುಕ್ರಿಸ್ತನನ್ನು ತಿರಸ್ಕಾರ ಮಾಡದವರನ್ನು ಹಿಂಸೆಗೆ ಗುರಿಮಾಡಿ ಕೊಲ್ಲುತ್ತಿದ್ದರು. ಕರ್ತನಾದ ಯೇಸುಕ್ರಿಸ್ತನಲ್ಲಿ ಸದ್ಭಕ್ತರಾಗಿ ಜೀವಿಸುವುದಕ್ಕೆ ಮನಸ್ಸು ಮಾಡುವವರೆಲ್ಲರೂ ಹಿಂಸೆಗೆ ಗುರಿಯಾಗುವರು (2 ತಿಮೊ. 3:17). ಸ್ಮುರ್ನ ಸಭೆ ಹೀಗೆ ಆರಂಭವಾಯಿತೆಂಬುದಕ್ಕೆ ಯಾವುದೇ ಪುರಾವೆಗಳಿಲ್ಲ.

**ಸಭೆಗೆ ದೇವರ ಪ್ರತ್ಯಕ್ಷತೆ :** (ಪ್ರಕ. 2:9):– ಸತ್ಯವೇದವನ್ನು ಬರೆದವರೆಲ್ಲರೂ ಸತ್ತರೂ ಅವರು ಯಾರ ಕುರಿತು

ಯೆಹೋವನೇ, ನಿನ್ನ ಭುಜಬಲವು ಎಷ್ಟೋ ಘನವಾದದ್ದು; ಯೆಹೋವನೇ,
ನಿನ್ನ ಭುಜಬಲವು ನಿನ್ನ ಶತ್ರುಗಳನ್ನು ಪುಡಿಪುಡಿಮಾಡುತ್ತದೆ (ವಿಮೋ. 15:6).

ಬರೆದಿದ್ದಾರೋ ಆತನು ಜೀವಂತವಾಗಿದ್ದಾನೆ. ಸತ್ತವನಾಗಿದ್ದ, ಜೀವಿತನಾಗಿ ಬಂದ ಅಧ್ಯಂತನು, ಮೊದಲನೆಯವನೂ, ಕಡೆಯವನೂ. ಇದರಲ್ಲಿ ಮರಣ ಮತ್ತು ಪುನರುತ್ಥಾನವೆಂಬ ಎರಡು ಪದಗಳನ್ನು ಕಾಣಬಹುದು. ಲೋಕವು ಈ ಲೋಕದಲ್ಲಿ ಜೀವಿಸುವವರನ್ನು ಮಾತ್ರ ಕಂಡಿದೆ ಆದರೆ ನಮ್ಮ ಕರ್ತನು ಎಂದೆಂದಿಗೂ ಜೀವಿಸುವವನಾಗಿದ್ದಾನೆ. ಕ್ರಿಸ್ತನು ಮರಣದ ಮೂಲಕ ಹಾದು ಹೋದದ್ದರಿಂದ ವಿಶ್ವಾಸಿಗಳು ಹೆದರಬೇಕಾಗಿಲ್ಲ. ಕ್ರಿಸ್ತನು ಎದ್ದು ಬಂದಂತೆ ನಾವು ಎದ್ದು ಬರುತ್ತೇವೆ. ನಮಗೂ ಪುನರುತ್ಥಾನವಿದೆ.

**ಬಾಹ್ಯ ಹಾಗೂ ಅಂತರಿಕವಾದ ಹಿಂಸೆ (ಪ್ರಕ. 2:9). ಹಿಂಸೆಯ 3 ಕಾರಣಗಳು:**

1) **ಸಂಕೇತ :** ಗ್ರೀಕ್ ಪದ (Tixlipssis) ಗೋಧಿಕಾಳು. ಗಿರಣಿಯನ್ನು ಹಾದುಹೋಗುವ ಅನುಭವ.
2) **ಬಡತನ :** 3 ಕಾರಣಗಳಿಗಾಗಿ ಬಡತನ :– 1) ಸಮಾಜದ ಅತೀ ಕೆಳಮಟ್ಟದ ಜನರಾಗಿದ್ದರು ಕ್ರೈಸ್ತರು (ಮತ್ತಾ. 5:3, ಯಾಕೋ. 2:5). 2) ಕ್ರಿಸ್ತನ ನಿಮಿತ್ತ ಆಸ್ತಿಪಾಸ್ತಿಗಳನ್ನು ನಷ್ಟಪಡಿಸಿದರು (ಇಬ್ರಿ. 10:34).
3) ಚಕ್ರವರ್ತಿಯು ಕ್ರೈಸ್ತರಿಗೆ ಎದುರು ಬಿದ್ದುದ್ದರ ನಿಮಿತ್ತ ಸರಕಾರದ ಯಾವುದೇ ಸವಲತ್ತುಗಳು ಇವರಿಗೆ ಸಿಗುತ್ತಿರಲಿಲ್ಲ. ವಚನ 9ರಲ್ಲಿ ಆದರೂ ಸಭೆ ಸಂಪನ್ನವಾಗಿತ್ತು ಎಂದು ಹೇಳುತ್ತದೆ (2 ಕೊರಿ. 6:9–11).

**ಬಾಧೆಗಳು:** ಈ ಸಮಯದಲ್ಲಿ ಕೆಲವರು ಬಾಧೆ ನಿಮಿತ್ತ ಸೆರೆಯಲ್ಲಿದ್ದಾರೆ. ದೇವ ಜನರಿಗೆ ಇರುವ ಬಾಧೆ ಕೇವಲ 10 ದಿನಕ್ಕೆ ಮಾತ್ರ ನಂತರ ಬಿಡುಗಡೆ ಇದೆ (1 ಪೇತ್ರ. 5:10). ಕ್ರಿಸ್ತನಲ್ಲಿ ನಿಮ್ಮನ್ನು ತನ್ನ ನಿತ್ಯ ಪ್ರಭಾವಕ್ಕೆ ಕರೆದ ಕೃಪಾಪೂರ್ಣನಾದ ದೇವರು ತಾನೇ **ನೀವು ಸ್ವಲ್ಪ ಕಾಲ ಭಾದೆಪಟ್ಟ ಮೇಲೆ ನಿಮ್ಮನ್ನು ಯೋಗ್ಯ ಸ್ಥಿತಿಗೆ ತಂದು ನೆಲೆಗೊಳಿಸಿ ಬಲಪಡಿಸುವನು ಆತನಿಗೆ ಅಧಿಪತ್ಯವೂ ಯುಗಯುಗಾಂತರಗಳಲ್ಲಿಯೂ ಇರಲಿ ಆಮೆನ್.**

ಕ್ರೈಸ್ತರಿಗೆ ಬಾಧೆಗಳು ಸ್ವಲ್ಪ ಕಾಲಕ್ಕೆ ಮಾತ್ರ, ಯಾಕೆ ಕ್ರೈಸ್ತರಿಗೆ ಬಾಧೆ ಬರುತ್ತದೆ?

1) ಮನೋಭಾವ ಪರೀಕ್ಷಿಸಲು (ಧರ್ಮೋ. 8:2–5, ಆದಿ. 22:1).
2) ಪಶ್ಚಾತ್ತಾಪಪಟ್ಟು ಕರ್ತನ ಬಳಿ ಹಿಂತಿರುಗಲು (ಅ.ಕೃ. 4:6–10).
3) ಬಹು ಕಷ್ಟ ತಾಳಿ ದೇವರಾಜ್ಯದೊಳಗೆ ಪ್ರವೇಶಿಸಲು (ಅ.ಕೃ. 14:22).
4) ಬಿತ್ತಿದ್ದನ್ನು ಕೊಯ್ಯಲು (ರೋಮ. 2:9, ಗಲಾ. 6:7).
5) ಬಾದೆಗಳಿಗಾಗಿ ನೇಮಿಸಲ್ಪಟ್ಟಿದ್ದೇವೆ (1 ಥೆಸ. 3:3, ಫಿಲಿ. 1:29).
6) ದೇವರ ಪ್ರೀತಿಯ ಶಿಕ್ಷೆ (ಇಬ್ರಿ. 12:5–6, ಕೀರ್ತ. 119:67–7).
7) ದೇವರ ಮಹಿಮೆಗಾಗಿ (ಯೋಹಾ. 11:4).
8) ದೇವರ ಹಸ್ತವು ಪ್ರಕಟವಾಗಲು (2 ಪೂರ್ವ. 20:1–30).
9) ನಂಬಿಕೆಯಲ್ಲಿ ದೃಢವಾಗಿ ನಿಲ್ಲಲು (ಯೂದ. 1:6, 1 ಪೇತ್ರ. 5:6–12).
10) ದ್ವಿಗುಣವಾದ ಆಶೀರ್ವಾದಗಳನ್ನು ಹೊಂದಲು (ಯೋಬ. 42:10).

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

**ದಯಮಾಡಿ ನಿಮ್ಮ ಗಮನಕ್ಕೆ:** ವಿಶ್ವಾಸದ ಮನೆಯು ಕೇವಲ ರಸ್ತೆಯಲ್ಲಿರುವ ಅನಾಥರು ಹಾಗೂ ನಿರ್ಗತಿಕರಿಗೆ ಮಾತ್ರ ಮೀಸಲಾಗಿದೆ. ವಿನಹ ಮನೆಯವರಿಗಲ್ಲ. ದಯಮಾಡಿ ಯಾರ ಪ್ರಭಾವ ಅಥವಾ ಒತ್ತಡವನ್ನು ವಿಶ್ವಾಸದ ಮನೆಯ ಆಡಳಿತ ಮಂಡಳಿಗಾಗಲಿ ಅಥವಾ ಇನ್ನಾವ ಸಭೆಯವರಿಗಾಗಲಿ, ಸೇವಕರಿಗಾಗಲಿ ಮಾಡಬಾರದೆಂದು ಈ ಮೂಲಕ ನಮ್ಮ ಎಲ್ಲಾ ಓದುಗರಿಗೂ ಮತ್ತು ಹಿತೈಷಿಗಳಿಗೂ ನಮ್ರತೆಯಿಂದ ಕೇಳಿಕೊಳ್ಳುತ್ತೇವೆ.

**– ಸಂಪಾದಕರು, ದೇವರ ಸ್ವರ.**

ಯೆಹೋವನೇ, ನಿನ್ನ ಆಜ್ಞೆಗಳು ಬಹುಖಂಡಿತವಾಗಿವೆ; ಸದಾ ನಿನ್ನ ಮನೆಗೆ ಯೋಗ್ಯವಾದದ್ದು ಪರಿಶುದ್ಧತ್ವವೇ (ಕೀರ್ತ. 93:5).

# ಭಕ್ತರ ಹೇಳಿಕೆಗಳು:

* ಆತ್ಮನ ವರಗಳ ಮೂಲಕ ಪ್ರಪಂಚವನ್ನು ಅಲ್ಲಾಡಿಸಿದ ಓರಲ್ ರಾಬರ್ಟ್‌ರವರ ಘೋಷಣೆ ಏನು ಗೊತ್ತೇ ? God is your source, plant a sead of faith, Expect a Miracle. ಕರ್ತನೇ ಎಲ್ಲಾ ಒಳ್ಳೆಯದಕ್ಕೂ ಮೂಲ ಕಾರಣನು. ನಂಬಿಕೆಯ ಬೀಜವನ್ನು ಬಿತ್ತಿರಿ. ಅದ್ಭುತವನ್ನು ನಿರೀಕ್ಷಿಸಿರಿ ಎಂಬುದೇ. ಅದ್ಭುತಗಳನ್ನು ಪಡೆಯಬೇಕಾದರೆ ಕರ್ತನಲ್ಲಿ ನಂಬಿಕೆ ಇಡಬೇಕು. ಮಾತ್ರವಲ್ಲ, ಆ ನಂಬಿಕೆ ದೃಢವಾಗಿರಬೇಕು. ದೇವರ ಅಸ್ತಿತ್ವದಲ್ಲಿ, ಆತನ ವಾಗ್ದಾನಗಳಲ್ಲಿ ಎಳ್ಳಷ್ಟು ಸಂದೇಹಪಡಬಾರದು. **ಕರ್ತನು ಅಪ್ರಮೇಯ ಮಹಾಕಾರ್ಯಗಳನ್ನೂ ಅಸಂಖ್ಯವಾದ ಅದ್ಭುತಕೃತ್ಯಗಳನ್ನೂ ಮಾಡುತ್ತಾನೆ** (ಯೋಬ. 9:10).

* ಒಬ್ಬನು ತನಗೆ ನಂಬಿಕೆಯುಂಟೆಂದು ಹೇಳಿಕೊಂಡು ತಕ್ಕ ಕ್ರಿಯೆಗಳಿಲ್ಲದವನಾಗಿದ್ದರೆ ಪ್ರಯೋಜನವೇನು? (ಯಾಕೋ. 2:14). ಒಬ್ಬ ದೇವಸೇವಕರು ತನಗೆ ಬಹಳ ದೊಡ್ಡ ನಂಬಿಕೆ ಇರುವದೆಂದು ಹೆಮ್ಮೆಯಿಂದ ಎಲ್ಲರ ಬಳಿಯೂ ಹೇಳುತ್ತಿದ್ದರು. ಇತರರ ಬಗ್ಗೆ ಕೇವಲವಾಗಿ ಮಾತಾಡುತ್ತಿದ್ದರು. ಆದರೆ ಅವರು ತನ್ನ ನಂಬಿಕೆಯನ್ನು ಕ್ರಿಯೆಯಲ್ಲಿ ತೋರಿಸಲಿಲ್ಲ. ಒಮ್ಮೆ ಅವರು ಒಂದು ಎತ್ತರವಾದ ಬೆಟ್ಟದ ಮೇಲೆ ಹೋದಾಗ, ನಡೆಯುತ್ತಾ ಕಾಲು ಜಾರಿ ಕೆಳಕ್ಕೇ ಬಿದ್ದು ಬಿಟ್ಟರು. ಆದರೂ ಒಂದು ಮರದ ಕೊಂಬೆಯನ್ನು ಹಿಡಿದುಕೊಂಡು ತೂಗಾಡುತ್ತಿದ್ದರು. ಕೆಳಗೆ ನೋಡಿದರೆ, ಆಳವಾದ ಪಾತಾಳ. ಮರವನ್ನು ಏರಲೂ ಆಗುತ್ತಿಲ್ಲ. ಸಹಾಯಕ್ಕೆ ಹತ್ತಿರದಲ್ಲಿ ಯಾರೂ ಕಾಣುತ್ತಿಲ್ಲ. ಎಷ್ಟು ಹೊತ್ತು ಹೀಗೆ ತೂಗಾಡುತ್ತಿರುವರು. ದೇವರೇ ನನ್ನನ್ನು ಕಾಪಾಡು ಎಂದು ಮೊರೆಯಿಟ್ಟರು. ಕರ್ತನು ಮೇಲುದನಿಯಲ್ಲಿ ಮಗನೇ ನೀನು ಹಿಡಿದಿರುವ ಕೊಂಬೆಯಿಂದ ನಿನ್ನ ಕೈಯನ್ನು ತೆಗೆ ಎಂದನು. ಆದರೆ ದೇವ ಸೇವಕರಿಗೆ ಭಯ. ಹೇಗೆ ದೇವರೇ, ಮರದ ಕೊಂಬೆಯಿಂದ ನನ್ನ ಕೈಯನ್ನು ತೆಗೆಯುವದು. ತೆಗೆದರೆ ಕೆಳಗೆ ಬೀಳುತ್ತೇನೆ ಎಂದು ಪ್ರಾರ್ಥಿಸಲಾರಂಭಿಸಿದರು. ಕರ್ತನು ಹೇಳಿದನು. ನನ್ನನ್ನು ನಂಬಿ ಕೈಬಿಡು ಎಂದನು. ಆದರೆ ಅವರದೋ, ಕ್ರಿಯೆಯಿಲ್ಲದ ನಂಬಿಕೆ. ಇದಕ್ಕಿದ್ದಂತೆ ಆ ಮರದ ಕೊಂಬೆ ಮುರಿದುಕೊಂಡು ಅದರೊಂದಿಗೆ ಆತನೂ ಬಿದ್ದುಬಿಟ್ಟನು. ಏನಾಶ್ಚರ್ಯ ಸಿನಿಮಾ ತಂಡದವರು ಚಿತ್ರೀಕರಣಕ್ಕಾಗಿ ಕೆಳಗೆ ಒಂದು ಬಲೆಯನ್ನು ಕಟ್ಟಿದ್ದರು. ದೇವಸೇವಕರು ಅದರೊಳಗೆ ಬಿದ್ದು ಯಾವುದೇ ಕೇಡೂ ಉಂಟಾಗದೆ ರಕ್ಷಿಸಲ್ಪಟ್ಟರು. ಆಗ ಆ ಸೇವಕರು ದೇವರೇ ಕ್ರಿಯೆಯೊಂದಿಗೆ ನಿನ್ನನ್ನು ನಂಬುತ್ತೇನೆ ಎಂದು ಹೇಳಿ ಸ್ತುತಿಸಿದರು.

* ತನ್ನ ಕುಟುಂಬ ಯಾಕೆ ಉನ್ನತಿಗೆ ಬರುತ್ತಿಲ್ಲ. ತನ್ನ ಸಭೆ ಏಕೆ ಉಜ್ಜೀವನವನ್ನು ಕಾಣುತ್ತಿಲ್ಲ ಎಂದು ಯೋಚಿಸುತ್ತಾ ಬಹಳ ಬೇಸರದಿಂದ ಒಬ್ಬ ಭಕ್ತನು ಕುಳಿತಿದ್ದನು. ಆಗ ಅವನ ಪಕ್ಕದಲ್ಲಿದ್ದ ಒಂದು ಇರುವೆಯ ಗುಂಪನ್ನು ಕಂಡನು. ಏಳು ಎಂಟು ಇರುವೆಗಳು ಒಂದು ಕಲ್ಲುಸಕ್ಕರೆಯ ತುಂಡನ್ನು ಎಳೆದುಕೊಂಡು ಹೋಗಲು ಪ್ರಯತ್ನಿಸುತ್ತಿದ್ದವು. ಸಕ್ಕರೆಯ ತುಂಡು ಚಿಕ್ಕದೇ. ಆದರೆ ಅದು ಸ್ವಲ್ಪವೂ ಅಲುಗಾಡುತ್ತಿರಲೇ ಇಲ್ಲ. ಇರುವೆಗಳ ಬಲವೋ ಅಧಿಕ. ಯಾಕೆ, ಸಕ್ಕರೆ ತುಂಡು ಅಲುಗಾಡುತ್ತಿಲ್ಲವೆಂದು ಆತನು ಸೂಕ್ಷ್ಮವಾಗಿ ಗಮನಿಸಿದಾಗ ಅದರ ಕಾರಣ ತಿಳಿಯಿತು. ಆ ಎಂಟು ಇರುವೆಗಳು ಎಂಟು ದಿಕ್ಕುಗಳಿಗೆ ಎಳೆಯುತ್ತಿದ್ದದರಿಂದ ಸಕ್ಕರೆ ತುಂಡನ್ನು ಎಳೆದುಕೊಂಡು ಹೋಗಲು ಸಾಧ್ಯವಾಗದೇ ಹೋಯಿತು.

ಆಗ ಅವರಿಗೆ ಅರಿವಾಯಿತು. ತನ್ನ ಕುಟುಂಬದಲ್ಲೂ ಒಂದು ಮನಸ್ಸು ಇಲ್ಲದೆ, ಒಬ್ಬರ ಮೇಲೊಬ್ಬರು ವಿರೋಧಿಸಿ ನಿಂತಿರುವದರಿಂದ ತನ್ನ ಕುಟಂಬ ಉನ್ನತಿ ಹೊಂದಲು ಸಾಧ್ಯವಾಗುತ್ತಿಲ್ಲ. ತನ್ನ ಸಭೆಯ ಉಜ್ಜೀವನದಲ್ಲಿ ಉನ್ನತಿ ಕಾಣದೇ ಇರುವದಕ್ಕೆ ಇದೇ ಕಾರಣ ಎಂದು. ಒಂದು ಮನಸ್ಸು ಅಗತ್ಯವಾದದ್ದು. ಕುಟುಂಬ ಪ್ರಾರ್ಥನೆಯಲ್ಲಿ, ದೇವಭಕ್ತಿಯಲ್ಲಿ, ಕಾಣಿಕೆ ನೀಡುವದರಲ್ಲಿ ಒಂದು ಮನಸ್ಸುಬೇಕು. ಅಂದು ಶಿಷ್ಯರು ಒಂದು ಮನಸ್ಸಿನಿಂದ ಕೂಡಿದವರಾಗಿ ಇದ್ದದರಿಂದ ಯೆರೂಸಲೇಮಿನಲ್ಲಿ ಒಂದು ಉಜ್ಜೀವನವನ್ನು ಕಂಡರು (ಅ.ಕೃ. 2:1). ಆಹಾ ಸಹೋದರರು ಒಂದಾಗಿರುವದು ಎಷ್ಟೋ ಒಳ್ಳೇದು, ಎಷ್ಟೋ ರಮ್ಯವಾದದ್ದು.... ಅಲ್ಲಿ ಆಶೀರ್ವಾದವೂ ಜೀವವೂ ಸದಾಕಾಲ ಇರಬೇಕೆಂದು ಯೆಹೋವನು ಆಜ್ಞಾಪಿಸಿದನು (ಕೀರ್ತ. 133:1–3).

– ಸಂಗ್ರಹ.

ಯೆಹೋವನು ನಿಮ್ಮ ಮೇಲೆ ಕೃಪಾಕಟಾಕ್ಷವಿಟ್ಟು ಶಾಂತಿಯನ್ನು ಅನುಗ್ರಹಿಸಲಿ (ಅರಣ್ಯ. 6:26).

# ಯೌವನಸ್ಥರ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ನಮ್ಮ ಕರ್ತನೂ ರಕ್ಷಕನೂ ಆದ ಯೇಸುಕ್ರಿಸ್ತನ ಸುಮಧುರ ನಾಮದಲ್ಲಿ ದೇವರ ಸ್ವರ ಮಾಸಪತ್ರಿಕೆಯನ್ನು ಓದುತ್ತಿರುವ ಎಲ್ಲಾ ಓದುಗರಿಗೂ ಮತ್ತು ಯೌವನಸ್ಥರಿಗೆ ನನ್ನ ಪ್ರೀತಿಯ ವಂದನೆಗಳು. ದೇವರ ಸ್ವರ ಮಾಸಪತ್ರಿಕೆಯು ನಿಜವಾಗಿಯೂ ನಿಮ್ಮ ಜೀವಿತದಲ್ಲಿ ಆಶೀರ್ವಾದಕರವಾಗಿದೆಯೆಂದು ನಾನು ಬಲವಾಗಿ ನಂಬುತ್ತೇನೆ. ಈ ಪತ್ರಿಕೆಯು ಇಂದು ನೀವು ದೇಶದ ಅಥವಾ ವಿಶ್ವದ ಯಾವ ಭಾಗದಲ್ಲಿದ್ದರೂ ನಿಮ್ಮನ್ನು ಸಂಧಿಸುವಂತೆ ಮಾಡಿದ್ದಕ್ಕಾಗಿ ನಾನು ನನ್ನ ಸೃಷ್ಠಿಕರ್ತನನ್ನು ವಂದಿಸುತ್ತೇನೆ. ಈ ಸಂಚಿಕೆಯು ನಿಮ್ಮನ್ನು ಆತ್ಮೀಕವಾಗಿ ಇನ್ನು ಉನ್ನತವಾಗಿ ನಡೆಸುತ್ತದೆಂದು ನಾನು ನಂಬುತ್ತೇನೆ ಮತ್ತು ಕರ್ತನಲ್ಲಿ ಪ್ರಾರ್ಥಿಸುತ್ತೇನೆ.

ಕಳೆದ ಎರಡು ಸಂಚಿಕೆಯಲ್ಲಿ ನಾವು ಪವಿತ್ರಾತ್ಮನೊಂದಿಗೆ ನಡೆಯುವುದರ ಕುರಿತು ವಾಕ್ಯಧಾರದಿಂದ ಕಲಿತುಕೊಂಡಿದ್ದೇವೆ. ಹೇಗೆ ಮರಿಯಳು ತನ್ನ ಜೀವಿತದಲ್ಲಿ ಪವಿತ್ರಾತ್ಮನನ್ನು ಅಂಗೀಕರಿಸಿದಳು ಮತ್ತು ಆಕೆಯ ಜೀವಿತದಲ್ಲಿ ಆಗುವ ಎಲ್ಲ ಬದಲಾವಣೆಗಳಿಗೆ ಒಪ್ಪಿಸಿಕೊಟ್ಟಳು ಎಂಬುದನ್ನು ನಾವು ನೋಡಿದೆವು. ಮಾತ್ರವಲ್ಲದೇ ಶಿಷ್ಯರು ಸಹಾ ತಮ್ಮ ಜೀವಿತದಲ್ಲಿ ಪವಿತ್ರಾತ್ಮನನ್ನು ಅಂಗೀಕರಿಸಿದರು ಎಂಬುದನ್ನು ಸ್ವಲ್ಪವಾಗಿ ನೋಡಿದೆವು. ಈ ಸಂಚಿಕೆಯಲ್ಲಿ ಆ ವಿಷಯವಾಗಿ ಪವಿತ್ರಾತ್ಮನ ಸಹಾಯದೊಂದಿಗೆ ಮತ್ತಷ್ಟನ್ನು ಕಲಿಯೋಣ.

ಪ್ರಿಯ ಪವಿತ್ರಾತ್ಮನೇ, ಈ ಸಮಯದಲ್ಲಿ ನನ್ನನ್ನು ನಿಮ್ಮ ಕರಗಳಲ್ಲಿ ಸಮರ್ಪಿಸಿ ಕೊಡುತ್ತಾ ಇದ್ದೇನೆ. ನಿನ್ನ ವಾಕ್ಯದ ಸತ್ಯವನ್ನು ನನಗೆ ಕಲಿಸಿರಿ. ನಿಮ್ಮೊಂದಿಗೆ ನಾನು ನಡೆಯುವ ಮಗನಾಗಿ/ಮಗಳಾಗಿ ಮಾರ್ಪಡಿಸಿ, ನನ್ನನ್ನೇ ನಿಮ್ಮ ಕರಗಳಲ್ಲಿ ಒಪ್ಪಿಸಿ ಕೊಡುತ್ತಿದ್ದೇನೆ, ಯೇಸುವಿನ ನಾಮದಲ್ಲಿ ತಂದೆಯೇ, ಆಮೆನ್.

ನಾವು ಯೋಹಾ 20:22ರಲ್ಲಿ – ಯೇಸು ತನ್ನ ಶಿಷ್ಯರ ಮೇಲೆ ಊದಿ ಅವರಿಗೆ – ಪವಿತ್ರಾತ್ಮವರವನ್ನು ತಕ್ಕೊಳ್ಳಿರಿ ಅಂದನು. ಅಂದರೆ ಯೇಸು ತಾನು ಹೋಗುವ ಮೊದಲೇ ಪವಿತ್ರಾತ್ಮನನ್ನು ಅಂಗೀಕರಿಸುವದರ ಬಗ್ಗೆ ತನ್ನ ಶಿಷ್ಯರಿಗೆ ತಿಳಿಸಿದ್ದನು. ಇದನ್ನು ನಾವು ಯೋಹಾನ 14ನೇ ಅಧ್ಯಾಯದಲ್ಲಿ ನೋಡುವುದಕ್ಕೆ ಸಾಧ್ಯ. ಅನೇಕರು ಹೌದು ಯೋಹಾನ 14:16ರಲ್ಲಿ ಹೇಳಿದ್ದಾನೆ ಎಂದು ಹೇಳುವುದುಂಟು. ಆದರೆ ಇದನ್ನು ನಾವು ಸೂಕ್ಷ್ಮವಾಗಿ ನೋಡುವುದಾದರೆ ಬಹಳ ಆಸಕ್ತವರವಾದ ಸಂಗತಿಯನ್ನು ತಿಳಿದುಕೊಳ್ಳಲು ಸಾಧ್ಯ. ಹೇಗೆಂದರೆ ಯೋಹಾನ 14:8 ರಿಂದ ನಾವು ನೋಡುವುದಾದರೆ:

“ಫಿಲಿಪ್ಪನು – ಸ್ವಾಮಿ, ನಮಗೆ ತಂದೆಯನ್ನು ತೋರಿಸು, ನಮಗೆ ಅಷ್ಟೇ ಸಾಕು ಅಂದನು. ಯೇಸು ಅವನಿಗೆ – ಫಿಲಿಪ್ಪನೇ, ನಾನು ಇಷ್ಟು ದಿವಸ ನಿಮ್ಮ ಸಂಗಡ ಇದ್ದರೂ ನೀನು ಇನ್ನೂ ನನ್ನನ್ನು ಅರಿತುಕೊಳ್ಳಲಿಲ್ಲವೇ. ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ. ನಮಗೆ ತಂದೆಯನ್ನು ತೋರಿಸೆಂದು ನೀನು ಹೇಳುವದು ಹೇಗೆ? ನಾನು ತಂದೆಯಲ್ಲಿದ್ದೇನೆ, ತಂದೆಯು ನನ್ನಲ್ಲಿ ಇದ್ದಾನೆ ಎಂದು ನೀನು ನಂಬುವುದಿಲ್ಲವೋ ? ನಾನು ನಿಮಗೆ ಹೇಳುವ ಮಾತುಗಳನ್ನು ನನ್ನಷ್ಟಕ್ಕೆ ನಾನೇ ಆಡುವದಿಲ್ಲ; ತಂದೆಯು ನನ್ನಲ್ಲಿ ಇದ್ದುಕೊಂಡು ತನ್ನ ಕ್ರಿಯೆಗಳನ್ನು ನಡಿಸುತ್ತಾನೆ. ನಾನು ತಂದೆಯಲ್ಲಿ ಇದ್ದೇನೆ, ತಂದೆಯು ನನ್ನಲ್ಲಿ ಇದ್ದಾನೆಂಬುವ ನನ್ನ ಮಾತನ್ನು ನಂಬಿರಿ; ಇಲ್ಲದಿದ್ದರೆ ಆ ಕ್ರಿಯೆಗಳನ್ನೇ ನೋಡಿ ನನ್ನ ಮಾತನ್ನು ನಂಬಿರಿ.

ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನನ್ನನ್ನು ನಂಬುವವನು ನಾನು ನಡಿಸುವ ಕ್ರಿಯೆಗಳನ್ನು ತಾನೂ ನಡಿಸುವನು; ಮತ್ತು ಅವುಗಳಿಗಿಂತ ಮಹತ್ತಾದ ಕ್ರಿಯೆಗಳನ್ನು ನಡಿಸುವನು; ಯಾಕೆಂದರೆ ನಾನು ತಂದೆಯ ಬಳಿಗೆ ಹೋಗುತ್ತೇನೆ. ಇದಲ್ಲದೆ ನೀವು ನನ್ನ ಹೆಸರಿನಲ್ಲಿ ಏನೇನು ಬೇಡಿಕೊಳ್ಳುವಿರೋ, ಅದನ್ನು ನೆರವೇರಿಸುವನು; ಹೀಗೆ ಮಗನ ಮೂಲಕವಾಗಿ ತಂದೆಗೆ ಮಹಿಮೆ ಉಂಟಾಗುವದು. ನೀವು ನನ್ನ ಹೆಸರಿನಲ್ಲಿ ನನ್ನನ್ನು ಏನಾದರೂ ಬೇಡಿಕೊಂಡರೆ ಅದನ್ನು ನೆರವೇರಿಸುವೆನು.

ನೀವು ನನ್ನನ್ನು ಪ್ರೀತಿಸುವುದಾದರೆ ನನ್ನ ಆಜ್ಞೆಗಳನ್ನು ಕೈಗೊಂಡು ನಡೆಯುವಿರಿ. ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು. ಆ ಸಹಾಯಕನು ಯಾರಂದರೆ ಸತ್ಯದ ಆತ್ಮನೇ. ಲೋಕವು ಆತನನ್ನು ನೋಡದೆಯೂ ತಿಳಿಯದೆಯೂ ಇರುವುದರಿಂದ ಆತನನ್ನು ಹೊಂದಲಾರದು. ನೀವು ಆತನನ್ನು ಬಲ್ಲಿರಿ; ಹೇಗೆಂದರೆ ನಿಮ್ಮ ಬಳಿಯಲ್ಲಿ ವಾಸಮಾಡುತ್ತಾನೆ, ಮತ್ತು ನಿಮ್ಮೊಳಗೆ ಇರುವನು. ವಾಕ್ಯ 25ರಿಂದ; “ಈ ಮಾತುಗಳನ್ನು ನಾನು ಇನ್ನೂ ನಿಮ್ಮ ಬಳಿಯಲ್ಲಿರುವಾಗ ನಿಮಗೆ ಹೇಳಿದ್ದೇನೆ. ಆದರೆ ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೊಡುವ ಪವಿತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು.

ಈ ವಾಕ್ಯಗಳನ್ನು ಓದುವಾಗ ನಾವು ಸರ್ವೇ

ನಮ್ಮ ಹಿತಕ್ಕಾಗಿ ನೀನು ಮಾಡಿದ ಆಲೋಚನೆಗಳೂ ಅದ್ಭುತಕಾರ್ಯಗಳೂ ಎಷ್ಟೋ ವಿಶೇಷವಾಗಿವೆ (ಕೀರ್ತ. 40:5).

ಸಾಧಾರಣವಾಗಿ ಓದಿ ಮುಗಿಸುತ್ತೇವೆ ಅಥವಾ ಏನನ್ನು ಅರ್ಥಮಾಡಿಕೊಳ್ಳದೇ ಸುಮ್ಮನಾಗಿ ಬಿಡುತ್ತೇವೆ. ಆದರೆ ಈ ವಾಕ್ಯಗಳಲ್ಲಿ

* ಫಿಲಿಪ್ಪನು ತಂದೆಯನ್ನು ತೋರಿಸೆಂದು ಕೇಳಿದ.(ವ.9)
* ಯೇಸು ಫಿಲಿಪ್ಪನ ಬಯಕೆಗೆ ಉತ್ತರಿಸಿದ ರೀತಿ – ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ.
* ಯೇಸುವು – ತಂದೆಯು ಜೊತೆಯಿರುವುದನ್ನು ಮತ್ತು ಆತನು ಜೊತೆಗಿದ್ದು ಎಲ್ಲ ಕ್ರಿಯೆಗಳನ್ನು ಮಾಡುವುದನ್ನು ತಿಳಿಸಿದನು.
* ನನ್ನನ್ನು ನಂಬುವವನು ನಾನು ನಡಿಸುವ ಕ್ರಿಯೆಗಳನ್ನು ತಾನೂ ನಡಿಸುವನು; ಮತ್ತು ಅವುಗಳಿಗಿಂತ ಮಹತ್ತಾದ ಕ್ರಿಯೆಗಳನ್ನು ನಡಿಸುವನು; ಮತ್ತು ಅವುಗಳಿಗಿಂತ ಮಹತ್ತಾದ ಕ್ರಿಯೆಗಳನ್ನು ನಡಿಸುವನು. ಯಾಕೆಂದರೆ ನಾನು ತಂದೆಯ ಬಳಿಗೆ ಹೋಗುತ್ತೇನೆ.

ಇಲ್ಲಿಯೇ ರಹಸ್ಯವು ಅಡಕವಾಗಿದೆ. ಏನೆಂದರೆ, ಆತನು ತಂದೆಯ ಬಳಿ ಹೋಗುವುದರಿಂದ ತಂದೆಯು – ಯೇಸುವು ಸೇರಿ ಏನೆಲ್ಲ ಸಂಗತಿಗಳನ್ನು, ಸೇವೆಗಳನ್ನು ಮಾಡುತ್ತಿದ್ದರೋ ಆ ಸಂಗತಿ – ಸೇವೆಗಳನ್ನು ನಾವು ಒಬ್ಬೊಂಟಿಗರಾಗಿ ಮಾಡದೇ ಅದನ್ನು ಆತನು ಕಳುಹಿಸಿ ಕೊಡುವ ಪವಿತ್ರಾತ್ಮನ ಮೂಲಕ ಮಾಡುವುದರ ಕುರಿತಾದ ಮಹತ್ತಾದ ಸತ್ಯವನ್ನು ಯೇಸುವು ಇಲ್ಲಿ ತನ್ನು ಶಿಷ್ಯರಿಗೆ ಪ್ರಕಟಿಸಿದನು. ಈ ವಿಷಯದ ಕುರಿತು ನೀವು ಎಷ್ಟು ಉತ್ಸುಕರಾಗಿದ್ದಿರೋ ನನಗೆ ಗೊತ್ತಿಲ್ಲ, ಆದರೆ ನಾನು ಇದನ್ನು ನಿಮಗೆ ಬರೆಯುತ್ತಾ ಹಂಚುತ್ತಿರುವಾಗಲೇ ನಾನು ಆತನು ಮಾಡಲಿಕ್ಕಿರುವುದರ ಕುರಿತು ಆಲೋಚಿಸುವಾಗ ಬಹಳ ರೋಮಾಂಚನಕಾರಿಯಾಗಿ ಅನಿಸುತ್ತದೆ. ಏಕೆಂದರೆ, ನಾವು ಈ ಲೋಕದಲ್ಲಿ ಆತನಿಗಾಗಿ ಮಾಡಲಿಕ್ಕಿರುವ ಸಂಗತಿಯು ಸಾಧಾರಣವಾದುದಲ್ಲ. ತಂದೆ ಮತ್ತು ಯೇಸು ಸೇರಿ ಮಾಡಿದ ಸಂಗತಿಗಳನ್ನು ಯೇಸು ನಮ್ಮಲ್ಲಿ ಪವಿತ್ರಾತ್ಮನ ಮೂಲಕ ಮಾಡಲು ಮನಸ್ಸುಳ್ಳವನಾಗಿದ್ದಾನೆ. ಆದರೆ ಇಂದು ಬಹಳ ದು:ಖಕರ ಸಂಗತಿಯೆಂದರೆ, ಅನೇಕರು ಪವಿತ್ರಾತ್ಮನ ಕುರಿತು ಅವಹೇಳನವಾಗಿ ಮಾತನಾಡುವುದು ಮತ್ತು ಬಹಳ ಹಗುರವಾಗಿ ಏನಿಸುವದರಿಂದ ಪವಿತ್ರಾತ್ಮನ ಕ್ರಿಯೆಗಳನ್ನು ಅವರ ಜೀವಿತದಲ್ಲಿ ನೋಡುವುದಕ್ಕೆ ಸಾಧ್ಯವಾಗದೇ, ಜಯಕರ ಕ್ರಿಸ್ತೀಯ ಜೀವಿತವನ್ನು ಹಾಗೂ ಸೇವೆಯನ್ನು ಮಾಡಲಾರದೇ ಪರಿತಪಿಸುತ್ತಿದ್ದಾರೆ ಮತ್ತು ಯಾರಾರೂ ಪವಿತ್ರಾತ್ಮನಿಂದ ಶಕ್ತವಾಗಿ ಉಪಯೋಗಿಸಲ್ಪಡುತ್ತಿದ್ದರೋ ಅವರ ಕುರಿತು ಖಂಡಿಸುವುದರಲ್ಲಿಯೂ ಇತರರ ಮುಂದೆ ಕೀಳಾಗಿ ಮಾತನಾಡುತ್ತಾ ಕಾಲಹರಣ ಮಾಡುತ್ತಿದ್ದಾರೆಯೇ ಹೊರತು ಇನ್ನೇನನ್ನೂ ಮಾಡುತ್ತಿಲ್ಲ.

ನಾವು ಶಿಷ್ಯರ ಜೀವಿತವನ್ನು ನೋಡುವುದಾದರೆ, ಮೂರು ವರ್ಷಕ್ಕಿಂತಲೂ ಅಧಿಕವಾಗಿ ಅವರು ಯೇಸುವಿನ ಜೊತೆಯಿದ್ದವರು ಈಗ ಯೇಸು ಸತ್ತು, ಹೂಣಲ್ಪಟ್ಟು ಎದ್ದ ನಂತರ ಅವರನ್ನು ಸಂಧಿಸಿ ಅವರ ಮೇಲೆ ಊದಿ ಪವಿತ್ರಾತ್ಮನ ವರವನ್ನು ತಕ್ಕೊಳಿರಿ ಎಂದು ಹೇಳಿದಾಕ್ಷಣ ನಾವು ನೀವು ಎಣಿಸುವ ಹಾಗೆ ಅವರು ಟೀಕೆ–ಟಿಪ್ಪಣಿಗಳನ್ನು ಮಾಡುವವರಾಗಿರದೇ ಚಿಕ್ಕ ಮಕ್ಕಳ ಹಾಗೆ ನಂಬಿ ಪವಿತ್ರಾತ್ಮನನ್ನು ಅಂಗೀಕರಿಸಿದರು. ಹಾಗೆಂದ ಕೂಡಲೇ ಅಲ್ಲಿಂದಲೇ ಅವರು ಏನೂ ಮಹತ್ತರ ಕಾರ್ಯಗಳನ್ನು ಮಾಡದೇ, ಯೇಸು ಹೇಳುವ ಮಾತುಗಳನ್ನು ತಮ್ಮ ಹೃದಯದಲ್ಲಿಟ್ಟುಕೊಂಡು ಅಪೊ 1:8ರಲ್ಲಿ ಹೇಳುವ ಹಾಗೆ ಆ ಪವಿತ್ರಾತ್ಮನ ಶಕ್ತಿಗಾಗಿ ಕಾದಿದ್ದರು. ಇಂದು ಅನೇಕರು ಪವಿತ್ರಾತ್ಮನನ್ನು ಅಂಗೀಕರಿಸದೇ ಆತನ ಶಕ್ತಿ ಸಾಮರ್ಥ್ಯ ಬೇಕೆನ್ನುತ್ತಾರೆ. ಎಂಥ ವಿಪರ್ಯಾಸ!!!

ಮುಂದೆ ನಾವು 14:26ರಲ್ಲಿ ನೋಡುವಾಗ, ತಂದೆ ಕಳುಹಿಸಿಕೊಡುವ ಪವಿತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು. ಇಲ್ಲಿ ಗಮನಿಸಬೇಕಾದದ್ದು ಪವಿತ್ರಾತ್ಮನು ಒಂದು ಉದ್ದೇಶದೊಂದಿಗೆ ತಂದೆಯಿಂದ ಕಳುಹಿಸಲ್ಪಟ್ಟವನಾಗಿದ್ದಾನೆ. ಆತನು ಸುಮ್ಮನೇ ಬಂದು ಕಾಲಹರಣವನ್ನು ಮಾಡದೇ (ಕೆಲವರು ಪವಿತ್ರಾತ್ಮನನ್ನು ಹೊಂದಿದ್ದೇನೆಂದು ಹೇಳುವವರು ಏನನ್ನು ಮಾಡದೇ ಕೇವಲ ಕಾಲವನ್ನು ಕಳಕೊಳ್ಳುತ್ತಾ ದೇವರನ್ನು ದೂಷಿಸುವುದಲ್ಲದೇ ದೇವರ ಆತ್ಮನಿಂದ ಉಪಯೋಗ ವಾಗುತ್ತಿರುವವರನ್ನು ದೂಷಿಸುತ್ತಿರುತ್ತಾರೆ. ಇಂಥವರು ಹೆಸರಿಗೆ ಮಾತ್ರ ಪವಿತ್ರಾತ್ಮನನ್ನು ಹೊಂದಿದ್ದೇವೆಂಬ 'ಹಣೆಪಟ್ಟಿ' ಉಳ್ಳವರು) ಯೇಸು ಈ ಲೋಕದಲ್ಲಿ ಹೇಳಿಕೊಟ್ಟ ಸಂಗತಿಗಳನ್ನು ಉಪದೇಶಿಸಿ, ಯೇಸು ಹೇಳಿದ್ದನ್ನೆಲ್ಲಾ ನೆನಪಿಗೆ ತರುವನು.

ಮುಂದಿನ ಸಂಚಿಕೆಗಳಲ್ಲಿ ಬಹಳಷ್ಟನ್ನು ಪವಿತ್ರಾತ್ಮನ ಸಹಾಯದೊಂದಿಗೆ ಕಲಿಯೋಣ. ದಯವಿಟ್ಟು ನನಗಾಗಿ, ನನ್ನ ಕುಟುಂಬಕ್ಕಾಗಿ ಮತ್ತು ಸೇವೆಗಾಗಿ ನಿಮ್ಮ ಪ್ರಾರ್ಥನೆಯಲ್ಲಿ ಕರ್ತನ ಬಳಿ ಪ್ರಾರ್ಥಿಸಿರಿ. ನಿಮ್ಮ ಸಲಹೆಗಳನ್ನು ಮತ್ತು ಕರ್ತನು ನಿಮ್ಮೊಂದಿಗೆ ಮಾತನಾಡಿರುವುದನನ್ನು ತಪ್ಪದೇ ನನಗೆ ಬರೆದು ಕಳುಹಿಸಿ. ನನ್ನ ಇ–ಮೇಲ್: jsma2j@gmail.com. ಕರ್ತನು ನಿಮ್ಮನ್ನು ಹೇರಳವಾಗಿ ಆರ್ಶೀವದಿಸಲಿ.

ಮುಂದುವರೆಯುವದು...

ಕರ್ತನಾದ ಯೇಸುಕ್ರಿಸ್ತನಲ್ಲಿ ನಿಮ್ಮವ

**ಸಭಾ॥ ಜಾನ್ ಸ್ಟೀಫನ್ ಮೊಂತೆರೋ**

ನಾನು ಯೆಹೋವನಲ್ಲಿ ಪರಮಾನಂದಪಡುವೆನು, ನನ್ನ ಆತ್ಮವು ನನ್ನ ದೇವರಲ್ಲಿ ಹಿಗ್ಗುವದು (ಯೆಶಾ. 61:10).

# ಹಿಡಿದುಕೊ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**"ನಿಮ್ಮಲ್ಲಿ ಯಾವನಾದರೂ ದೇವರ ಕೃಪೆಗೆ ತಪ್ಪಿ ಹಿಂಜಾರಿಯದಂತೆ ಯಾವ ವಿಷವುಳ್ಳ ಬೇರು ನಿಮ್ಮಲ್ಲಿ ಚಿಗುರಿ ಅಸಮಾಧಾನವನ್ನು ಹುಟ್ಟಿಸಿ ಸಭೆಯವರನ್ನು ಕೆಡಿಸದಂತೆ ಯಾವ ಜಾರನಾಗಲಿ, ಏಸಾವನಂಥ ಪ್ರಾಪಂಚಿಕನಾಗಲಿ ನಿಮ್ಮಲ್ಲಿ ಇರದಂತೆ ಜಾಗ್ರತೆಯಾಗಿ ನೋಡಿಕೊಳ್ಳಿರಿ"** (ಇಬ್ರಿ. 12:15–16). ದೇವರ ಕೃಪೆಯಿಂದ ನಮಗೆ ರಕ್ಷಣೆ ಉಂಟಾಯಿತು. ಅದನ್ನು ಸಾಧಿಸಿಕೊಳ್ಳುವ. **"ಆತನ ಕೃಪೆಯನ್ನು ವ್ಯರ್ಥಪಡಿಸಬೇಡಿರಿ"** (2 ಕೊರಿ. 6:1). ಪೌಲನು ತೀತನಿಗೆ ಬರೆಯುತ್ತಾನೆ, **"ಆದಕಾರಣ ಅವರು ಯೆಹೂದ್ಯರ ಕಲ್ಪನಾ ಕಥೆಗಳಿಗೂ ಸತ್ಯ ಭ್ರಷ್ಟರಾದ ಮನುಷ್ಯರ ವಿಧಿಗಳಿಗೂ ಲಕ್ಷಕೊಡದೆ ಕ್ರಿಸ್ತನಂಬಿಕೆಯಲ್ಲಿ ಸ್ವಸ್ಥಚಿತ್ತರಾಗಿರುವಂತೆ ಅವರನ್ನು ಕಠಿಣವಾಗಿ ಖಂಡಿಸು** (ತೀತ. 1:13–15).

3) **ಪ್ರಯಾಸ ಪಡಬೇಕು : "ನನ್ನಲ್ಲಿ ಕಾರ್ಯಸಾಧಿಸುವ ದೇವರ ಬಲವನ್ನು ಪ್ರಯಾಸಮಾಡಿ ಇದಕ್ಕೋಸ್ಕರವೇ ಹೋರಾಡುತ್ತೇನೆ, ಪ್ರಯಾಸಪಡುತ್ತೇನೆ"** (ಕೊಲೊ. 1:29). ಪ್ರತಿಯೊಂದು ಕಾರ್ಯಗಳ ಯಶ್ವಸಿಯ ಹಿಂದೆ ಪ್ರಯಾಸವಿದ್ದೇವಿರುವುದು. ಪ್ರಯಾಸಪಡದೆ ಪ್ರತಿಫಲ ನಿರೀಕ್ಷಿಸಲು ಅಸಾಧ್ಯ. **"ಮನುಷ್ಯನು ತನ್ನ ಹೊಟ್ಟೆಪಡಿಗಾಗಿ ಬಹಳಷ್ಟು ಪ್ರಯಾಸಪಡುವದು ಆದರೂ ಅವನಿಗೆ ತೃಪ್ತಿಯಿಲ್ಲ"** (ಪ್ರಸ. 6:7). ಆದರೂ ಮನುಷ್ಯನು ದುಡಿದು ದುಡಿದು ಅದಕ್ಕಾಗಿ ಪಡುವ ಪ್ರಯಾಸದಿಂದ ಲಾಭವೇನು? (ಪ್ರಸ. 3:9). ಎಂದು ಸತ್ಯವೇದ ನಮ್ಮನ್ನು ಪ್ರಶ್ನಿಸುತ್ತದೆ. ಆದರೆ ದೇವಮಗುವೆ ನೀನು ಕರ್ತನಲ್ಲಿಪಡುವ ಪ್ರಯಾಸ ನಿಷ್ಫಲವಾಗದು. ಅದಕ್ಕೆ ಬಹಳಷ್ಟು ಪ್ರತಿಫಲವಿದೆ (1 ಕೊರಿ. 15:58). ಆದ್ದರಿಂದ ನಾವು ಆಸಕ್ತಿಯಿಂದ ಇದನ್ನು ಮಾಡಬೇಕಾಗಿದೆ. ದೇವರ ವಾಕ್ಯ ಹೇಳುತ್ತದೆ, **"ಎಲ್ಲರ ಸಂಗಡ ಸಮಾಧಾನದಿಂದಿರುವುದಕ್ಕೂ, ಪರಿಶುದ್ಧತೆಯನ್ನು ಹೊಂದುವುದಕ್ಕೂ ಪ್ರಯತ್ನ ಮಾಡಿರಿ"** (ಇಬ್ರಿ. 12:14). ಅದಲ್ಲದೆ ನೀತಿ, ವಿಶ್ವಾಸ, ಪ್ರೀತಿ ಮತ್ತು ಸಮಾಧಾನವನ್ನು ಸಂಪಾದಿಸುವುದಕ್ಕೆ ಶುದ್ಧ ಹೃದಯವುಳ್ಳವರಾಗಿ ಕರ್ತನನ್ನು ಬೇಡಿಕೊಳ್ಳುವವರ ಸಂಗಡ ಪ್ರಯಾಸಪಡು (2 ತಿಮೊ. 2:22). ಪ್ರಿಯ ದೇವಮಗುವೆ, ವಿರೋಧಿಯಾದ ಸೈತಾನನು ವಂಚಿಸಿ ಪಾಪಕ್ಕೆ ಒಳಪಡಿಸಲು ಬಹಳಷ್ಟು ಪ್ರಯತ್ನಿಸುವಾಗ ಎಚ್ಚರವಾಗಿದ್ದು ನಿನ್ನ ಕೈಯಲ್ಲಿ ಕೊಟ್ಟದ್ದನ್ನು ಉಳಿಸಿಕೊಳ್ಳುವುದಕ್ಕೆ ಪ್ರಯಾಸಪಡಲೇಬೇಕಾಗಿದೆ. **"ನೀತಿ, ಭಕ್ತಿ, ನಂಬಿಕೆ, ಪ್ರೀತಿ, ಸ್ಥಿರಚಿತ್ತ, ಸಾತ್ವಿಕತ್ವ ಇವುಗಳನ್ನು ಸಂಪಾದಿಸುವುದಕ್ಕೆ ಪ್ರಯಾಸಪಡು"** (1 ತಿಮೊ. 6:11).

4) **ಹೋರಾಡಬೇಕು :** ನಮ್ಮ ಬಳಿಯಲ್ಲಿದ್ದದನ್ನು ಅಪಹರಿಸಲು ವೈರಿಯು ಬಹಳವಾಗಿ ನಮ್ಮ ಜೊತೆ ಹೋರಾಡುತ್ತಾನೆ. ನಾವು ಆ ವೈರಿಯ ಮೇಲೆ ಜಯ ಹೊಂದಬೇಕಾದರೆ ಕ್ರಮವಾಗಿ ಹೋರಾಡಬೇಕಾಗಿದೆ. **"ನೀವು ಬಿರುದನ್ನು ಪಡಕೊಳ್ಳಬೇಕೆಂತಲೇ ಓಡಿರಿ, ಅದರಲ್ಲಿ ಹೋರಾಡುವವರೆಲ್ಲರು ಎಲ್ಲಾ ವಿಷಯಗಳಲ್ಲಿ ಮಿತವಾಗಿರುತ್ತಾರೆ"** (1 ಕೊರಿ. 9:25). **"ಕ್ರಿಸ್ತ ನಂಬಿಕೆಯುಳ್ಳವರು ಮಾಡತಕ್ಕ ಶ್ರೇಷ್ಟ ಹೋರಾಟವನ್ನು ಮಾಡು"** (1 ತಿಮೊ. 6:12). ಕ್ರೈಸ್ತರಾದ ನಮಗೆ ಬಹಳ ಹೋರಾಟವಿದೆ. ಆದರೆ ಆ ಹೋರಾಟ ಮನುಷ್ಯರ ಸಂಗಡವಲ್ಲ. ಹೇಗೂ ಹೋರಾಡುವ ಹೋರಾಟವಲ್ಲ, ಬದಲಾಗಿ ನಿಯಮದ ಪ್ರಕಾರ ಹೋರಾಡುವ ಹೋರಾಟವಾಗಿರುತ್ತದೆ. **"ಯಾವನಾದರೂ ರಂಗಸ್ಥಳದಲ್ಲಿ ಎದುರಾಳಿಯೊಡನೆ ಹೋರಾಡುವಾಗ ನಿಯಮದ ಪ್ರಕಾರ ಹೋರಾಡದಿದ್ದರೆ ಅವನಿಗೆ ಜಯಮಾಲೆ ಸಿಗುವುದಿಲ್ಲ"** (2 ತಿಮೋ. 2:5). ಅಪೋಸ್ತಲನಾದ ಪೌಲನು ಬರೆಯುತ್ತಾನೆ, **"ನಾನು ಹೊರಟು ಹೋಗಬೇಕಾದ ಸಮಯವು ಸಮೀಪಕ್ಕೆ ಬಂದದೆ. ಶ್ರೇಷ್ಟ ಹೋರಾಟವನ್ನು ಮಾಡಿದ್ದೇನೆ. ನ್ನನ ಓಟವನ್ನು ಕಡೆಗಾಣಿಸಿದ್ದೇನೆ. ಕ್ರಿಸ್ತ ನಂಬಿಕೆಯನ್ನು ಕಾಪಾಡಿಕೊಂಡಿದ್ದೇನೆ. ನೀತಿವಂತರಿಗೆ ದೊರಕುವ ಜಯಮಾಲೆಯು ನನಗೆ ಸಿದ್ಧವಾಗಿದೆ"** (2 ತಿಮೊ. 4:6–8). ಹೌದು ಪ್ರಿಯರೇ, ಕ್ರಿಸ್ತನಂಬಿಕೆಯನ್ನು ಕಾಪಾಡಿಕೊಳ್ಳಬೇಕಾದರೆ ನಾವು ಹೋರಾಡಲೇ ಬೇಕಾಗಿದೆ (ಯೂದ. 1:3). ಮಾತ್ರವಲ್ಲದೆ ಸದಾ, ನಿತ್ಯವೂ ಪ್ರಾರ್ಥನೆಯಲ್ಲಿಯೂ ಕೂಡಾ ಹೋರಾಡಬೇಕಾಗಿದೆ. **"ಇವನು ಪ್ರಾರ್ಥನೆ ಮಾಡುವಾಗಲೆಲ್ಲಾ ನಿಮಗೋಸ್ಕರ ಹೋರಾಡಿ ನೀವು ಪ್ರವೀಣರಾಗಿಯೂ ಎಲ್ಲಾ ವಿಷಯಗಳಲ್ಲಿ ದೇವರ ಚಿತ್ತವನ್ನು ಕುರಿತು ಪೂರ್ಣ ನಿಶ್ಚಯವುಳ್ಳವರಾಗಿಯೂ ನಿಂತಿರಬೇಕೆಂದು ವಿಜ್ಞಾಪನೆ ಮಾಡುತ್ತೇನೆ** (ಕೊಲೊ. 4:12). ಪ್ರಿಯ ದೇವ ಮಗುವೆ ನೀನು ಈಗಾಗಲೇ ರಕ್ಷಣೆ ಹೊಂದಿರುವುದಾದರೆ ನೀನು ಹೊಂದಿರುವ ರಕ್ಷಣೆಯನ್ನು ಅಲಕ್ಷಮಾಡಬೇಡ. ವೈರಿಯು ಅದನ್ನು ಅಪಹರಿಸದಂತೆ ಜೋಪಾನವಾಗಿ ಕಾಪಾಡಿಕೊಳ್ಳು. ಯೇಸು ಹೇಳುತ್ತಾನೆ, **"ಅನ್ಯಾಯ ಮಾಡುವವನು ಇನ್ನೂ ಅನ್ಯಾಯ ಮಾಡಲಿ; ಮೈಲಿಗೆಯಾದವನು ತನ್ನನ್ನು ಇನ್ನೂ ಮೈಲಿಗೆ ಮಾಡಿಕೊಳ್ಳಲಿ; ನೀತಿವಂತನು ಇನ್ನೂ ನೀತಿಯನ್ನು ಅನುಸರಿಸಲಿ; ಪವಿತ್ರನು ತನ್ನನ್ನು ಇನ್ನೂ ಪವಿತ್ರಮಾಡಿಕೊಳ್ಳಲಿ. ಇಗೋ, ಬೇಗ ಬರುತ್ತೇನೆ; ನಾನು ಪ್ರತಿಯೊಬ್ಬರಿಗೆ ಅವನವನ ನಡತೆಯ ಪ್ರಕಾರ ಕೊಡತಕ್ಕ ಪ್ರತಿಫಲವು ನನ್ನ ಕೈಯಲ್ಲಿ ಅದೆ"** (ಪ್ರಕ. 22:11–12). ಪ್ರಿಯ ದೇವಮಗುವೆ ನಿನಗಿರುವುದನ್ನು ಬಿಗಿಯಾಗಿ ಹಿಡಿದುಕೊ. ಅದರ ವಿಷಯದಲ್ಲಿ ಎಚ್ಚರವಾಗಿರು. ಅದನ್ನು

ಯೆಹೋವನ ಆಶೀರ್ವಾದವು ಭಾಗ್ಯದಾಯಕವು; ಅದು ವ್ಯಸನವನ್ನು ಸೇರಿಸದು
(ಜ್ಞಾನೋ. 10:22).

ಉಳಿಸುವುದಕ್ಕಾಗಿ ಪ್ರಯಾಸಪಡು. ಅಂತಿಮವಾಗಿ ಹೋರಾಡಲೇ ಬೇಕು. ಯಾವ ರೀತಿ ಪಂದ್ಯದಲ್ಲಿ ಹೋರಾಡಿ (ಕಡೆತನಕ) ಜಯ ಹೊಂದುತ್ತಾನೋ ಅವನಿಗೆ ಮಾತ್ರ ಪದಕ (ಬಿರುದು) ಸಿಗುವುದು ಹೊರತು ಸೋತು ಆಲಕ್ಷಿಸುವಾಗ ಪದವಿಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ. **"ನೀನು ಸಾಯಬೇಕಾದರೂ ನಂಬಿಗಸ್ತನಾಗಿರು; ನಾನು ನಿನಗೆ ಜೀವವೆಂಬ ಜಯಮಾಲೆಯನ್ನು ಕೊಡುವೆನು"**(ಪ್ರಕ. 2:10). **"ಯಾವನು ಜಯಶಾಲಿಯಾಗಿದ್ದು ನನಗೆ ಮೆಚ್ಚಿಕೆಯಾದ ಕೃತ್ಯಗಳನ್ನು ಕಡೇವರೆಗೂ ನಡಿಸುತ್ತಾನೋ ಅವನಿಗೆ ನಾನು ನನ್ನ ತಂದೆಯಿಂದ ಹೊಂದಿದ ಅಧಿಕಾರದಂತೆ ಜನಾಂಗಗಳ ಮೇಲೆ ಅಧಿಕಾರವನ್ನು ಕೊಡುವೆನು"** (ಪ್ರಕ. 2:26).

ಮುಂದುವರಿಯುವದು.....

ಕರ್ತನಲ್ಲಿ ನಿಮ್ಮ ಪ್ರೀತಿಯ
**ಪಾ|| ರೊನಾಲ್ಡ್ ಮಚಾದೋ**
ಬೇತೇಲ್ ಚರ್ಚ್, ಕಾಮಗೆರೆ.



# ಸ್ಥಳೀಯ ಮತ್ತು ವಿದೇಶ ಸುದ್ಧಿ

* ಅತಿ ಎತ್ತರದ ವಿಮಾನ ನಿಲ್ದಾಣ ನಿರ್ಮಾಣ : ಟಿಬೆಟ್‌ಗೆ ಹೊಂದಿಕೊಂಡಿರುವ ಹಿಮಾಲಯದ ಅತಿ ಎತ್ತರದ ಪ್ರದೇಶದಲ್ಲಿ ಚೀನಾವು ನಾಗರೀಕ ವಿಮಾನ ನಿಲ್ದಾಣ ನಿರ್ಮಾಣ ಕಾರ್ಯ ಕೈಗೊಂಡಿದೆ. ಇದು ಜಗತ್ತಿನಲ್ಲಿಯೇ ಅತಿ ಎತ್ತರದಲ್ಲಿರುವ ವಿಮಾನ ನಿಲ್ದಾಣ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ. ರಾಷ್ಟ್ರ ರಕ್ಷಣೆಯ ದೃಷ್ಟಿಯಿಂದ ಅತ್ಯಂತ ಆಯಕಟ್ಟಿನ ಪ್ರದೇಶವಾದ ಸಿಚುವಾನ್ ಪ್ರಾಂತ್ಯದ ಟಿಬೆಟಿಯನ್ ಸ್ವಾಯತ್ತ ಪ್ರದೇಶದಲ್ಲಿ 4.411 ಮೀಟರ್ ಎತ್ತರದಲ್ಲಿ ಈ ನಿಲ್ದಾಣದ ಕಾಮಗಾರಿ ನಡೆದಿದೆ.
* ವಿಕಿರಣ ಸೋರಿಕೆ ಪ್ರಮಾಣ ಬಹಿರಂಗ :- ಭೀಕರ ಸುನಾಮಿಯಿಂದಾಗಿ ಹಾನಿಗೊಂಡಿದ್ದ ಪುಕುಶಿಮಾ ಪರಮಾಣು ಸ್ಥಾವರದಲ್ಲಿ ಇದುವರೆಗೂ ಸೋರಿಕೆಯಾಗಿರುವ ವಿಕಿರಣದ ಅಂದಾಜು ಪ್ರಮಾಣವನ್ನು ಟೋಕಿಯಾ ವಿದ್ಯುತ್ ಶಕ್ತಿಕೊ ಇದೆ ಮೊದಲ ಬಾರಿಗೆ ಬಹಿರಂಗಪಡಿಸಿದೆ. 2011ರಲ್ಲಿ ಸಂಭವಿಸಿದ ಸುನಾಮಿಯಿಂದ ಹಾನಿಗೊಳಗಾದ ಸ್ಥಾವರದಿಂದ ಇಲ್ಲಿಯವರೆಗೆ 20–40 ಟ್ರಿಲಿಯನ್ ಬೆಕ್ವೆರೆಲ್ಸ್‌ನಷ್ಟು ವಿಕಿರಣ ಟ್ರಿಟಿಯಂ ಇಲ್ಲಿನ ಪೆಸಿಫಿಕ್ ಸಾಗರಕ್ಕೆ ಸೋರಿಕೆಯಾಗಿದೆ ಎಂದು ವಕ್ತಾರರು ತಿಳಿಸಿದ್ದಾರೆ.
* ದೇಶ ಬಹುದೊಡ್ಡ ಆರ್ಥಿಕ ಮುಗ್ಗಟ್ಟನ್ನು ಎದುರಿಸಿದ್ದು ಇದರ ಪರಿಣಾಮವಾಗಿ ದೇಶದಲ್ಲಿ ಅಸಮಾನತೆ ಬೆಳೆಯುತ್ತಿದೆ ಎಂದು ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮಾ ಎಚ್ಚರಿಸಿದ್ದಾರೆ. ಈ ಪರಿಸ್ಥಿತಿಯನ್ನು ಸರಿಪಡಿಸಿ ಮತ್ತೆ ಸುಸ್ಥಿತಿಗೆ ತರುವದು. ನಮ್ಮ ಮೊದಲ ಆದ್ಯತೆ ಎಂದು ಅವರು ಹೇಳಿದ್ದಾರೆ.
* ಬೋಧನೆಗಿಂತ ಭಿನ್ನವಾದ ಮಾದರಿಯಲ್ಲಿ ಬುದ್ಧಿಮಾಂದ್ಯರಿಗೆ ಅಂಗವಿಕಲರಿಗೆ ಮತ್ತು ಸಾಮಾನ್ಯ ಮಕ್ಕಳಿಗೆ ಶಿಕ್ಷಣ ನೀಡುವ ಉದ್ದೇಶದಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯ ವಿವಿಧ ಜಿಲ್ಲೆಗಳ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ "ನಮ್ಮ ಗ್ರಂಥಾಲಯ" ಎಂಬ ವಿನೂತನ ಯೋಜನೆಯನ್ನು ಆರಂಭಿಸಿದೆ.
* ಮಹಿಳೆಯರು ಗರ್ಭ ಧರಿಸುವುದು ಸಹಜ. ಆದರೆ ಪುರುಷರು! ಅದರಲ್ಲೂ ಎರಡು ವರ್ಷದ ಪುಟ್ಟ ಕಂದಮ್ಮನ ಹೊಟ್ಟೆಯಲ್ಲಿ ಭ್ರೂಣ ಪತ್ತೆಯಾದ ವಿಚಿತ್ರ ಘಟನೆ ಚೀನದಲ್ಲಿ ನಡೆದಿದೆ. ಇಲ್ಲಿನ ಹ್ಯೂಕ್ಸಿ ನಗರದ 2 ವರ್ಷದ ಬಾಲಕನ ಹೊಟ್ಟೆ ಇತ್ತೀಚೆಗೆ ದಿನೇ ದಿನೇ ಊದತೊಡಗಿತ್ತು. ಬರಬರುತ್ತಾ ಬಾಲಕನಿಗೆ ಉಸಿರಾಡುವುದೇ ಕಷ್ಟವಾಗಿತ್ತು. ಈ ಹಿನ್ನಲೆಯಲ್ಲಿ ಪೋಷಕರು ಆಸ್ಪತ್ರೆಗೆ ಕರೆದೊಯ್ದಿದ್ದರು. ಈ ವೇಳೆ ಸ್ಕ್ಯಾನಿಂಗ್ ಮಾಡಿದ ವೈದ್ಯರಿಗೆ ಶಾಕ್ ಕಾದಿತ್ತು. ಕಾರಣ, ಬಾಲಕನ ಹೊಟ್ಟೆಯಲ್ಲಿ ಇನ್ನೂ ಪೂರ್ಣವಾಗಿ ಬೆಳವಣಿಗೆ ಹೊಂದದ ಭ್ರೂಣ ಕಂಡುಬಂದಿತ್ತು. ಬಾಲಕನ ಅವಳಿ ಆಗಬೇಕಿದ್ದ ಈ ಭ್ರೂಣವು, ತಾಯಿಯ ಗರ್ಭದಲ್ಲೇ ಬಾಲಕನ ಹೊಟ್ಟೆ ಸೇರಿ ಈ ಅವಾಂತರವಾಗಿತ್ತು. ಇತ್ತೀಚೆಗೆ ಬಾಲಕನಿಗೆ ಶಸ್ತ್ರಚಿಕಿತ್ಸೆ ನಡೆಸಿದ ವೈದ್ಯರು ಭ್ರೂಣವನ್ನು ಹೊರತೆಗೆದು, ಬಾಲಕನ ಜೀವ ಉಳಿಸುವಲ್ಲಿ ಯಶಸ್ವಿಯಾಗಿದ್ದಾರೆ.
* ಸರ್ಕಾರಿ ಶಾಲೆಗಳಲ್ಲಿ 1 ನೇ ತರಗತಿಯಿಂದಲೇ ಇಂಗ್ಲೀಷ್‌ಅನ್ನು ಒಂದು ವಿಷಯವಾಗಿ ಬೋಧಿಸುವ ಪದ್ಧತಿ ಆರಂಭಿಸುವಂತೆ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ ಸಾರ್ವಜನಿಕ ಶಿಕ್ಷಣ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.
* ಅಮೆರಿಕ್ ಬಂದ್ : ಸರ್ಕಾರದ ಖರ್ಚುವೆಚ್ಚಗಳಿಗೆ ಅನುಮತಿ ನೀಡುವ ಧನ ವಿನಿಯೋಗ ಮಸೂದೆ ಅಂಗೀಕಾರವಾಗದ ಹಿನ್ನಲೆಯಲ್ಲಿ ಅಮೆರಿಕ ಸರ್ಕಾರ ತುರ್ತು ಸೇವೆ ಹೊರತುಪಡಿಸಿ ಎಲ್ಲ ಇಲಾಖೆ, ಸೇವೆಗಳನ್ನು 18 ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ದಿಢೀರ್ ಬಂದ್ ಮಾಡಿದೆ. ಇದರಿಂದಾಗಿ ಅಮೆರಿಕದಲ್ಲಿ ಅಲ್ಲೋಲ ಕಲ್ಲೋಲವಾಗಿದ್ದು, ಅದರ ಪರಿಣಾಮ ಅಂತಾರಾಷ್ಟ್ರೀಯ ವ್ಯವಹಾರಗಳ ಮೇಲೂ ಆಗಿದೆ.

ನನ್ನನ್ನು ಉನ್ನತ ಪ್ರದೇಶಗಳಲ್ಲಿ ನಿಲ್ಲಿಸುತ್ತಾನೆ
(ಧರ್ಮೋ. 22:34).

# ಕ್ರಿಸ್ತನ ಪ್ರಕಾಶವನ್ನು ಹೊಂದಿಕೋ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಕ್ರಿಸ್ತನಲ್ಲಿ ಪ್ರಿಯರೇ, ನೀವು ಕ್ರಿಸ್ತನಿಗಾಗಿ ಎದ್ದು ಪ್ರಕಾಶಿಸಬೇಕಾದರೆ ಅದು ಪ್ರಾರ್ಥನೆಯಿಂದ ಸಾಧ್ಯವೇ ಹೊರತು ನಿಮ್ಮ ಜ್ಞಾನ, ಬಲ, ಸಾಮರ್ಥ್ಯದಿಂದಾಗಲಿ ಅಸಾಧ್ಯವಾಗಿದೆ. ಒಂದು ವೇಳೆ ನೀವು ಸಿ.ಟಿ.ಹೆಚ್, ಬಿ.ಟಿ.ಹೆಚ್, ಡಿ.ಟಿ.ಹೆಚ್, ಎಂ.ಡಿ, ಪಿ.ಹೆಚ್.ಡಿ, ಇದಕ್ಕಿಂತ ಉನ್ನತವಾದ ಸತ್ಯವೇದ ಅಧ್ಯಯನ ಮಾಡಿ ರೆವರೆಂಡ್, ಡಾಕ್ಟರ್ ಪದವಿ ಪಡೆದಿರಬಹುದು ಅನೇಕ ಪವರ್ ಕಾನ್ಫರೆನ್ಸ್‌ಗಳಲ್ಲಿ ಪಾಲುಗೊಂಡಿರಬಹುದು. ಉನ್ನತ ಸೇವಕರುಗಳ ಕೂಟದಲ್ಲಿ ಭಾಗವಹಿಸಿರಬಹುದು. ಇದು ತಪ್ಪು ಅಂಥ ಹೇಳುತ್ತಿಲ್ಲ. ಇದು ಒಳ್ಳೆದೇ ಆಗಿದೆ. ಆತ್ಮೀಕವಾಗಿ ಉತ್ತೇಜನ ಹೊಂದಿಕೊಳ್ಳಬಹುದು. ಅಂದ ಮಾತ್ರಕ್ಕೆ ಎದ್ದು ಪ್ರಕಾಶಿಸಲು ಸಾಧ್ಯವಿಲ್ಲ.

ನೀವು ಕ್ರಿಸ್ತನಿಗಾಗಿ ಪ್ರಕಾಶಿಸಲು ದೇವರೊಂದಿಗೆ ನಿಮಗೆ ಆಳವಾದ ಒಂದು ಅನ್ಯೋನ್ಯತೆ ಇರಬೇಕು. ಕೋರಿಯಾ ದೇಶದ ಸಭೆಯ ಬೋಧಕ ಹಾಗೂ ಸೌವರ್ತಿಕರಾದ ಪಾಲ್ ಯಂಗಿ ಚೋರವರ ಸಭೆಯ ಉಜ್ಜೀವನಕ್ಕೆ ಕಾರಣ ಅತ್ಯಾಸಕ್ತಿಯುಳ್ಳ ಪ್ರಾರ್ಥನೆಯಾಗಿದೆ. ಅವರು ಅಧಿಕ ಸಮಯ ಕ್ರಿಸ್ತನೊಂದಿಗೆ ಕಳೆಯುವ ನಿಮಿತ್ತವಾಗಿ ಉಜ್ಜೀವನ ಉಂಟಾಗಿದೆ. ಯಾವ ರೀತಿ ನೀರಿನ ಬುಗ್ಗೆಯೊಂದಿಗೆ ನಿರಂತರವಾಗಿ ಒಡನಾಟವಿಟ್ಟುಕೊಳ್ಳುವ ಮರದ ಬೇರು ಫಲಿಸುವಂತೆ, ಒಂದು ಹಣತೆಯ ಬತ್ತಿ ಎಣ್ಣೆಯಲ್ಲಿ ಮುಳುಗಿರುವಂತೆ, ನೀವು ಪವಿತ್ರಾತ್ಮನೆಂಬ ಜೀವಜಲದ ಬುಗ್ಗೆಯೊಂದಿಗೆ ಸಂಪರ್ಕವಿಟ್ಟುಕೊಳ್ಳುವಾಗ ನಿಮ್ಮ ಅಂತರ್ಯ, ಪವಿತ್ರಾತ್ಮನಲ್ಲಿ ಮುಳುಗಿರುವಾಗ ಮಾತ್ರವೇ ಕ್ರಿಸ್ತನಿಗಾಗಿ ಎದ್ದು ಪ್ರಕಾಶಿಸಲು ಸಾಧ್ಯ.

**"ಜನರೆಲ್ಲಾ ದೀಕ್ಷಾಸ್ನಾನ ಮಾಡಿಸಿಕೊಂಡಾಗ ಯೇಸು ಸಹ ಸ್ನಾನ ಮಾಡಿಸಿಕೊಂಡು ಪ್ರಾರ್ಥನೆ ಮಾಡುತ್ತಿರುವಲ್ಲಿ ಆಕಾಶವು ತೆರೆಯಿತು; ಮತ್ತು ಪವಿತ್ರಾತ್ಮನು ದೇಹಾಕಾರವಾಗಿ ಪಾರಿವಾಳದ ಹಾಗೆ ಆತನ ಮೇಲೆ ಇಳಿದನು. ಆಗ ನೀನು ಪ್ರಿಯನಾಗಿರುವ ನನ್ನ ಮಗನು, ನಿನ್ನನ್ನು ನಾನು ಮೆಚ್ಚಿದ್ದೇನೆ ಎಂದು ಆಕಾಶವಾಣಿ ಆಯಿತು"** (ಲೂಕ. 3:21–22). ಕ್ರಿಸ್ತನು ಪ್ರಾರ್ಥಿಸಿದಾಗ ಪರಲೋಕದ ಬಾಗಿಲು ತೆರೆಯಲ್ಪಟ್ಟಿತ್ತು. ಹೌದು ಪ್ರಿಯರೇ, ನಮಗೆ ಪ್ರಾರ್ಥನೆಯ ಬೀಗದ ಕೈ ಕೊಡಲ್ಪಟ್ಟಿದೆ. 'ನೀವು ಪ್ರಾರ್ಥಿಸುವುದರ ಮೂಲಕ ಪ್ರತಿದಿನ ನರಕ ಮುಚ್ಚಬೇಕು, ಪರಲೋಕ ತೆರಯಬೇಕು'.

ನೀವು ಪ್ರಾರ್ಥಿಸುವಾಗ ಅನೇಕ ಆಶೀರ್ವಾದ ಹೊಂದಿಕೊಳ್ಳಬಹುದು. **ಮೊದಲನೆಯದಾಗಿ ನೀವು ಪ್ರಾರ್ಥಿಸುವಾಗ ನಿಮಗಾಗಿ ಪರಲೋಕ ತೆರೆಯಲ್ಪಡುತ್ತದೆ. ಎರಡನೆಯದಾಗಿ ನೀವು ಪವಿತ್ರಾತ್ಮನಿಂದ ತುಂಬಿಸಲ್ಪಡುತ್ತೀರಿ** (ಲೂಕ. 3:21–22). ನೀವು ಪ್ರತಿಸಾರಿ ಪ್ರಾರ್ಥಿಸಿದಾಗ ನಿಮ್ಮ ಬಲ ನವೀಕರಿಸಲ್ಪಡುತ್ತದೆ (ಲೂಕ. 3:21–22). **"ಯೆಹೋವನನ್ನು ನಿರೀಕ್ಷಿಸುವವರೋ ಹೊಸ ಬಲವನ್ನು ಹೊಂದುವರು; ಹದ್ದುಗಳಂತೆ ರೆಕ್ಕೆಗಳನ್ನು ಚಾಚಿಕೊಂಡು [ಏರುವರು]; ಓಡಿ ದಣಿಯರು, ನಡೆದು ಬಳಲರು"** (ಯೆಶಾ. 40:31). ಒಂದು ಮೊಬೈಲ್ ಫೋನು ಹೇಗೆ ಕರೆಂಟಿನೊಂದಿಗೆ ಚಾರ್ಜ್ ಆಗಿ ಮರುಬಳಕೆ ಬರುವ ಹಾಗೆ ನೀವು ಪ್ರಾರ್ಥಿಸಿದಾಗೆಲ್ಲಾ ಬಲಹೊಂದುತ್ತೀರಿ. ಎಫೆ. 3:16 ವಾಕ್ಯದ ಪ್ರಕಾರ ನಿಮ್ಮ ಅಂತರ್ಯ ಮನುಷ್ಯನು ಯಾವಾಗಲೂ ಬಲಹೊಂದುವುದು ಅವಶ್ಯವಾಗಿದೆ.

**ಮೂರನೆಯದಾಗಿ ದೇವರು ನಿಮ್ಮ ಸಂಗಡ ಮಾತನಾಡುತ್ತಾನೆ.** (ಲೂಕ. 3:22). ಹೌದು ನೀವು ಆತನ ಸ್ವರವನ್ನು ಕೇಳಬಹುದು. ದೇವರು ಬಾಲಕನಾದ ಸಮುವೇಲನೊಂದಿಗೆ ಮಾತಾಡಿದಾಗ ಸಮುವೇಲನಿಗೆ ಅರಿತುಕೊಳ್ಳಲಿಕ್ಕೆ ಸಾಧ್ಯವಾಗಲಿಲ್ಲ. ಇದಕ್ಕಿಂತ ಮುಂಚಿತವಾಗಿ ದೇವರ ಅನುಭವವಿರಲಿಲ್ಲ. ದೈವೋತ್ತರಗಳನ್ನು ಹೊಂದಿರಲಿಲ್ಲ. ಇದನ್ನು ಏಲೀಯ ಸಮುವೇಲನಿಗೆ ಹೇಗೆ ದೇವರ ಪಾದದಲ್ಲಿ ಕಾದು ಕುಳಿತುಕೊಳ್ಳಬೇಕೆಂದು ಕಲಿಸಿಕೊಟ್ಟನು. ದೇವರು ನಂತರ ಸಮುವೇಲನನ್ನು ತನ್ನ ಪ್ರವಾದಿಯಾಗಿ ಆರಿಸಿಕೊಂಡನು (1 ಸಮು. 3:1–21).

ಪ್ರಿಯರೇ, ನೀವು ಯಾವಾಗಲೂ ದೇವರೊಂದಿಗೆ ಮಾತಾಡಿ ಎದ್ದು ಹೋಗಬಾರದು ಆತನ ಪಾದದಲ್ಲಿ ಸ್ವಲ್ಪ ಸಮಯ ಕಾದು ಕುಳಿತುಕೊಳ್ಳುವವರಾಗಿರಬೇಕು. ಪ್ರಾರ್ಥನೆ ಎಂಬುದು ದ್ವಿಮುಖ ಸಂಭಾಷಣೆಯಾಗಿದೆ. ದೇವರು ನಿಮ್ಮ ಜೀವಿತದಲ್ಲಿ ಮಾತಾಡುವುದಕ್ಕೆ ಅವಕಾಶಕೊಡಿರಿ.

**ನಾಲ್ಕನೇದಾಗಿ ಪ್ರಾರ್ಥಿಸುವುದರ ಮೂಲಕ ದೇವರ ಚಿತ್ತವನ್ನು ತಿಳಿದುಕೊಳ್ಳಬಹುದು** (ಲೂಕ. 6:12–13).

**ಐದನೇಯದಾಗಿ ನೀವು ಪ್ರಾರ್ಥಿಸುವಾಗ ಸೈತಾನನು ನಿಮ್ಮನ್ನು ಬಿಟ್ಟುಹೋಗುತ್ತಾನೆ. "ಈ ಜಾತಿಯು ದೇವರ ಪ್ರಾರ್ಥನೆಯಿಂದಲೇ ಹೊರತು ಬೇರೆ ಯಾತರಿಂದಲೂ ಬಿಟ್ಟು**

ನೀನೇ ನನ್ನನ್ನು ರಕ್ಷಿಸುವ ದೇವರು; ಹಗಲೆಲ್ಲಾ ನಿನ್ನನ್ನೇ ನಿರೀಕ್ಷಿಸುವವನಾಗಿದ್ದೇನೆ
(ಕೀರ್ತ. 25:5).

**ಹೋಗುವದಿಲ್ಲವೆಂದು ಅವರಿಗೆ ಹೇಳಿದನು"** (ಮಾರ್ಕ. 9:29). **"ದೇವರು ನನ್ನ ಸಂಗಡ ಇರುವದು ನಿಶ್ಚಯ; ನಾನು ಆತನಿಗೆ ಮೊರೆಯಿಡುವಾಗಲೇ ನನ್ನ ಶತ್ರುಗಳು ಫಕ್ಕನೆ ಪಲಾಯನಮಾಡುವರು"** (ಕೀರ್ತ. 56:9). ಇವತ್ತು ಸೈತಾನನ ಆಕ್ರಮಣಕ್ಕೆ ಒಳಗಾಗಿದ್ದೀರಾ? ನೀವು, ಪ್ರಾರ್ಥಿಸಿರಿ.

ಕೀರ್ತ. 12:3 ವಾಕ್ಯದ ಪ್ರಕಾರ ದುಷ್ಟನ ದಂಡಾಧಿಕಾರವು ನಿಮ್ಮ ಸ್ವಾಸ್ಥ್ಯದಲ್ಲಿ ಮುರಿಯಲ್ಪಡುತ್ತದೆ. **ನಿಮಗೆ ಎದುರಿಸಲು ಕಲ್ಪಿಸಿದ ಯಾವುದೇ ಆಯುಧ ಫಲಿಸುವದಿಲ್ಲ** (ಯೆಶಾ. 54:17). **ಪರಾತ್ಪರನ ಮರೆಹೊಕ್ಕಿರುವವನು ಸುರಕ್ಷಿತನಾಗಿರುವನು** (ಕೀರ್ತ. 91:1). **"ಯೆಹೋವನೇ ನನ್ನ ಶರಣನು! ಪರಾತ್ಪರನ ನಿವಾಸಸ್ಥಾನ ಮಾಡಿಕೊಂಡಿದ್ದೀಯಲ್ಲಾ. ಯಾವ ಕೇಡೂ ನಿನಗೆ ಸಂಭವಿಸದು; ಉಪದ್ರವವು ನಿನ್ನ ಗುಡಾರದ ಸಮೀಪಕ್ಕೂ ಬಾರದು"** (ಕೀರ್ತ. 91:9–10).

**ಆರನೇಯದಾಗಿ ನಿಮ್ಮ ಮುಖ ಪ್ರಕಾಶವಾಗುತ್ತದೆ ಕಳೆಗುಂದಿದ ಮುಖ ಇರುವುದಿಲ್ಲ** (ಲೂಕ. 9:29).

**ಏಳನೇಯದಾಗಿ ಲೂಕ. 9:29 ನಿಮ್ಮನ್ನು ಪವಿತ್ರರನ್ನಾಗಿ ಮಾಡುತ್ತದೆ.** ಇಲ್ಲಿ ಪ್ರಾರ್ಥಿಸಿದ ಯೇಸುವಿನ ಬಟ್ಟೆ ಬೆಳ್ಳಗಾಯಿತು. ನೀವು ಪ್ರಾರ್ಥಿಸುವಾಗ ಪವಿತ್ರತೆಯನ್ನು ಹೊಂದಿಕೊಳ್ಳಬಹುದು. ಪವಿತ್ರತೆ– ಪ್ರತಿಯೊಬ್ಬ ವಿಶ್ವಾಸಿಯ ಉತ್ತುಂಗ ಮಟ್ಟವಾಗಿದೆ.

ನೀವು ಪ್ರಾರ್ಥನೆ ಮಾಡುವುದರ ಮೂಲಕ ನೀವು ಕ್ರಿಸ್ತನೊಂದಿಗೆ ಸಂಬಂಧ ಹೊಂದಿಕೊಳ್ಳಬಹುದು ಮತ್ತು ಕ್ರಿಸ್ತನಿಗಾಗಿ ಪ್ರಕಾಶಿಸಬಹುದು. ಅ.ಕೃ. 6–4 **ವಾಕ್ಯದ ಪ್ರಕಾರ ಪ್ರಾರ್ಥನೆಯಲ್ಲಿ ನಿರಂತರವಾಗಿ ಒಪ್ಪಿಸಿಕೊಡಬೇಕು.** ನಾವು ಎಲ್.ಕೆ.ಜಿ. ಪ್ರಾರ್ಥನೆಯಿಂದ ಹೊರಗೆ ಬರಬೇಕು. ಬೇಡಿಕೊಳ್ಳಿರಿ ನಿಮಗೆ ದೊರೆಯುವುದು. ಅಂದರೆ ನಮ್ಮ ಕುರಿತಾಗಿ ನಾವು ಚಿಂತಿಸದೇ ನಾವು ಪಿ.ಹೆಚ್.ಡಿ. ಪ್ರಾರ್ಥನೆಯ ಅನುಭವಕ್ಕೆ ಬರಬೇಕು. ಇದು ಮಧ್ಯಸ್ಥಿಕೆಯ ಪ್ರಾರ್ಥನೆ ಆಗಿದೆ. ಇದು ನಮ್ಮ ಇಷ್ಟಾರ್ಥ ಅಲ್ಲ, ಇದು ದೇವರ ಇಷ್ಟಾರ್ಥವಾಗಿದೆ. ಇದು ನಮ್ಮ ಸ್ವಾರ್ಥಕ್ಕಾಗಿ ಅಲ್ಲ, ಇದು ಒಡಕಿನಲ್ಲಿ ನಿಲ್ಲುವಂಥ ಪ್ರಾರ್ಥನೆ ಇದು ದೇವರಿಗೆ ಮೆಚ್ಚಿಕೆಯಾಗಿದೆ. ಈ ಒಡಕಿನಲ್ಲಿ ಪ್ರಾರ್ಥನೆ ಮಾಡಿದ ಮೋಶೆಯನ್ನು, ನೆಹೆಮಿಯನನ್ನು, ಯೆರೆಮಿಯನನ್ನು, ದಾನಿಯೇಲನನ್ನು ದೇವರು ತನ್ನ ರಾಜ್ಯದ ಕಟ್ಟೋಣದಲ್ಲಿ ಬಲವಾಗಿ ಉಪಯೋಗಿಸಿದನು ಇವರು ದೇವರಿಗಾಗಿ ಪ್ರಕಾಶಿಸಿದರು. ಈ ಪಿ.ಹೆಚ್.ಡಿ ಪ್ರಾರ್ಥನೆ ಅನುಭವಕ್ಕೆ ಇದಕ್ಕೆ ಇಷ್ಟೇ ಸಮಯವೆಂಬುದು ನಿಗದಿಯಿಲ್ಲ. ಇದು ಅಧಿಕವಾಗಿ ಕ್ರಿಸ್ತನೊಂದಿಗೆ ಕಳೆಯುವ ಸಮಯ ಮತ್ತು ಕ್ರಿಸ್ತನನ್ನು ಕಾಣುವ ಅನುಭವವಾಗಿದೆ. ಕರ್ತನು ತಾನೇ ನಿಮ್ಮಲ್ಲಿ ಆ ಬಯಕೆಯನ್ನು ಹುಟ್ಟಿಸಲಿ. ಕ್ರಿಸ್ತನ ಪ್ರೀತಿ ನಿಮ್ಮನ್ನು ಆತನ ಪಾದದಲ್ಲಿ ಹೆಚ್ಚಿನ ಸಮಯವನ್ನು ಕಳೆಯುವಂತೆ ಒತ್ತಾಯಿಸಲಿ. ಸ್ನಾನಿಕನಾದ ಯೋಹಾನನ ಹಾಗೆ ಪ್ರಾರ್ಥನೆ ಎಂಬ ಅಡವಿಯಲ್ಲಿ ಹೆಚ್ಚಿನ ಸಮಯವನ್ನು ಕಳೆಯುವವರಾಗಿದ್ದು ಕ್ರಿಸ್ತನಿಗಾಗಿ ಉರಿದು ಪ್ರಕಾಶಿಸಬೇಕೆಂಬುದೇ ನನ್ನ ಪ್ರಾರ್ಥನೆಯಾಗಿದೆ.

ಮುಂದುವರಿಯುವದು......

ಕರ್ತನು ತಾನೇ ನಿಮ್ಮೆಲ್ಲರನ್ನು ಹೇರಳವಾಗಿ ಆಶೀರ್ವದಿಸಲಿ.


## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | | | |
|---|---|---|---|
| ತಿಂಗಳಿಗೊಮ್ಮೆ | ರೂ. 500/– | ಆರು ತಿಂಗಳಿಗೊಮ್ಮೆ | ರೂ. 6000/– |
| ಮೂರು ತಿಂಗಳಿಗೊಮ್ಮೆ | ರೂ. 2000/– | ವರ್ಷಕ್ಕೊಮ್ಮೆ | ರೂ. 8000/– |

**ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.**

**ಮೊಬೈಲ್ : 9902334941**


ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ (ರೋಮ. 8:28).

**ಪ್ರಾರ್ಥನಾ ಮನವಿಗಳು**

- ದೇವರ ಸ್ವರ ಮಾಸ ಪತ್ರಿಕೆಯ ಸೇವೆಯನ್ನು ಕರ್ತನು ಆಶೀರ್ವದಿಸುವಂತೆ, ಸೇವೆಗೆ ಬೇಕಾದ ಅವಶ್ಯಕತೆಗಳನ್ನು ಕರ್ತನು ಪೂರೈಸುವಂತೆ ಪ್ರಾರ್ಥಿಸಿರಿ.
- ದೇಶದಲ್ಲಿ ಅತಿವೃಷ್ಟಿಯಿಂದ ತತ್ತರಿಸಿರುವ ಪ್ರದೇಶಗಳಲ್ಲಿ ಕರ್ತನ ಹಸ್ತವು ನೆಲೆಸಿ ರೈತರ ಮತ್ತು ಜಾನುವಾರಗಳ ಹಾಗೂ ಬೆಳೆಯ ಸಂರಕ್ಷಣೆಗಾಗಿ ಕರ್ತನಲ್ಲಿ ವಿಜ್ಞಾಪಿಸಿಕೊಳ್ಳೋಣ.
- ದೇಶದಲ್ಲಿ ಒಳಿತಿಗಾಗಿ ಶ್ರಮಿಸುತ್ತಿರುವ ಪ್ರತಿಯೊಬ್ಬ ರಾಜಕಾರಣಿಗಳಿಗಾಗಿ ಮತ್ತು ಅಧಿಕಾರಿಗಳಿಗಾಗಿ ಅವರ ಸುಭದ್ರತೆಗಾಗಿ ಪ್ರಾರ್ಥಿಸೋಣ.
- ಕರ್ನಾಟಕದ ಉಜ್ಜೀವನಕ್ಕಾಗಿ 29 ಜಿಲ್ಲೆಗಳ ಹೆಸರುಗಳನ್ನು ಹೇಳಿ ಪ್ರಾರ್ಥಿಸೋಣ. ಸುವಾರ್ತಿಕರನ್ನು ಕರ್ತನು ಎಬ್ಬಿಸುವಂತೆ ಕ್ರಿಸ್ತನ ಪಾದದಲ್ಲಿ ಪ್ರಾರ್ಥಿಸಿರಿ.
- ನಮ್ಮ ದೇಶದಲ್ಲಿ ಅಧಿಕವಾದ ಮಳೆಯಿಂದಾಗಿ ಜನರು ತಮ್ಮ ಮನೆಗಳನ್ನು ಕಳೆದುಕೊಂಡು ಆಹಾರಕ್ಕಾಗಿ ಆಶ್ರಯವಿಲ್ಲದೇ ಗೋಳಾಡುತ್ತಿದ್ದಾರೆ. ದೇವರು ಇವರಿಗೆ ಆಹಾರವನ್ನು ದಯಪಾಲಿಸುವುದಕ್ಕಾಗಿ ಮತ್ತು ಇವರನ್ನು ಸಂತೈಸುವುದಕ್ಕಾಗಿ ಪ್ರಾರ್ಥಿಸಿರಿ (ಆಮೋ. 8:11).
- ಎಲ್ಲಾ ಜನರಿಗೂ ಸುವಾರ್ತೆ ಸಾರಲ್ಪಟ್ಟು ಜನರು ರಕ್ಷಣೆಗೆ ಬರುವುದಕ್ಕಾಗಿಯೂ, ನಮ್ಮ ದೇಶದಲ್ಲಿ ಉಜ್ಜೀವನ ಬರುವುದಕ್ಕಾಗಿಯೂ ಪ್ರಾರ್ಥಿಸಿರಿ.


---

## ನಮ್ಮೊಂದಿಗೆ ಆಚರಿಸಿ

**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ**




**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**
**ಮೊಬೈಲ್: 9902334941**



**"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು; ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ."** ಜ್ಞಾನೋಕ್ತಿ 22:9.

ನೀವು ಪವಿತ್ರಾತ್ಮನ ಬಲಗೂಡಿದವರಾಗಿ ನಿರೀಕ್ಷೆಯಲ್ಲಿ ಅಭಿವೃದ್ಧಿಯನ್ನು ಹೊಂದುವಂತೆ ಅನುಗ್ರಹಿಸಲಿ (ರೋಮ. 15:13).

# ನೀತಿವಂತನ ಆಶೀರ್ವಾದಗಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**ರಕ್ಷಣೆಯ ಆಶೀರ್ವಾದಗಳು**

1) ನಿತ್ಯಜೀವ (1 ಯೋಹಾ. 2:23, ಯೋಹಾ. 3:16).
2) ಪಾಪಕ್ಷಮೆ (ಯೋಹಾ. 8:11, ಅ.ಕೃ. 13:39)
3) ನೀತಿವಂತರೆಂಬ ನಿರ್ಣಯ (ರೋಮ. 3:24–26).
4) ಪಾಪದ ಶಕ್ತಿಯಿಂದ ಬಿಡುಗಡೆ (ರೋಮ. 6:14).
5) ಅಬ್ರಹಾಮನಿಗುಂಟಾದ ಆಶೀರ್ವಾದಗಳು (ಗಲಾ. 3:13–14).
6) ಪರಿಶುದ್ಧಾತ್ಮನ ಅಭಿಷೇಕ (ಅ.ಕೃ. 1:8).
7) ಸಂತೋಷ (ಲೂಕ. 10:21, ಅ.ಕೃ. 13:52).
8) ದೇವರ ಅನ್ಯೋನ್ಯತೆ (ಎಫೆ. 2:14–15).
9) ಮಕ್ಕಳೆಂಬ ಹಕ್ಕು (ಎಫೆ. 1:7, ರೋಮ. 8:16–17).
10) ಪರಲೋಕದ ಆತ್ಮೀಯವಾದ ಸಕಲ ಆಶೀರ್ವಾದಗಳು (ಎಫೆ. 1:3).
11) ಕ್ರಿಸ್ತನು ನಮ್ಮೊಳಗಿದ್ದು ಪ್ರಭಾವದ ನಿರೀಕ್ಷೆಗೆ ಆಧಾರ ಭೂತನಾಗಿರುವುದು (ಕೊಲೊ. 1:27–28).
12) ಅಂಧಕಾರದ ಧೊರೆತನದಿಂದ ಬಿಡುಗಡೆ (ಕೊಲೊ. 1:13).
13) ದೈವೀಕ ಭದ್ರತೆ (ಮತ್ತಾ. 28:20).
14) ದೈವೀಕ ಬಲ (ಯಾಕೋ. 4:7, ಫಿಲಿ. 4:13).
15) ಶತ್ರುವಾದ ಸೈತಾನನ ಸಮಸ್ತ ಬಲದ ಮೇಲೆ ಅಧಿಕಾರ (ಲೂಕ. 10:19).
16) ಪರಿಶುದ್ಧವಾದ ಜೀವಿತ (ಎಫೆ. 1:1).
17) ಬಿಡುಗಡೆಯ ಜೀವಿತ (ಯೋಹಾ. 8:36).
18) ಸತ್ಯದ ಪರಿಜ್ಞಾನ (1 ತಿಮೊ. 2:4).
19) ಬೆಳಕಿನ ಜೀವಿತ (ಎಫೆ. 5:8, ಯೋಹಾ. 8:12).
20) ಪರಲೋಕದ ಸಂಸ್ಥಾನದ ಹಕ್ಕು (ಫಿಲಿ. 3:20–21).
21) ಶ್ರೇಷ್ಠ ಪುನರುತ್ಥಾನ (1 ಥೆಸ. 4:13–18).
22) ಸಫಲತೆ (ಯೆಹೋ. 1:5–9).
23) ತಲೆಯಾಗಿ ಜೀವಿಸುವ ಜೀವಿತ (ಧರ್ಮೋ. 28:13–14).
24) ದೈವೀಕ ಸಮಾಧಾನ (ಕೊಲೊ. 3:15–18).
25) ಕೃಪೆ (ಯೋಹಾ. 1:17–18).

ಹೀಗೆ ಹೇಳುತ್ತಾ ಹೋದರೆ ಅನೇಕ ಆಶೀರ್ವಾದಗಳಿವೆ. ಸತ್ಯವೇದದಲ್ಲಿ ದೇವರು ತನ್ನ ಮಕ್ಕಳಿಗೆ ದಯಪಾಲಿಸುವ ಇನ್ನೂ ಅನೇಕ ಆತ್ಮೀಕ ವಸ್ತ್ರಗಳಿವೆ.

1) **ನೀತಿಯೆಂಬ (ಧರ್ಮ) ವಸ್ತ್ರ** (ಯೆಶಾ. 61:10). ರಕ್ಷಣೆ ಹೊಂದುವಾಗ ಪಾಪದ ಕ್ಷಮೆಹೊಂದಿ ನರಕದಿಂದ ತಪ್ಪಿಸಿಕೊಳ್ಳುತ್ತೇವೆ. ಆಗ ಕರ್ತನು ತನ್ನ ರಕ್ತದ ಮೂಲಕ ನಮ್ಮನ್ನು ಎಲ್ಲಾ ಪಾಪಗಳಿಂದ ತೊಳೆದು ತೊಡಿಸುವ ವಸ್ತ್ರವೇ ನೀತಿಯ ವಸ್ತ್ರ. ನೀತಿ ಅಂದರೆ ದೇವರ ದೃಷ್ಟಿಯಲ್ಲಿ ಸರಿಯಾದ ಸ್ಥಿತಿಯಲ್ಲಿ ಪಾಪ ಮಾಡದ ಸ್ಥಿತಿಯಲ್ಲಿ ನಿಂತಿರುವುದು. ರೋಮ. 5:9 ಆತನ ರಕ್ತದಿಂದ ನೀತಿವಂತರಾಗಿರಲಾಗಿ ಆತನ ಮೂಲಕ ಬರುವ ಕೋಪಕ್ಕೆ ತಪ್ಪಿಸಿಕೊಳ್ಳುವುದು ಮತ್ತು ನಿಶ್ಚಯವಲ್ಲವೇ ದೇವರು ನಮಗೆ ನೀತಿಯ ವಸ್ತ್ರವನ್ನು ತೊಡಿಸಿದಾಗ ನಾವು ನೀತಿಯ ಜೀವನವನ್ನು ಆರಂಭಿಸುತ್ತೇವೆ. ಮುಂಚೆ ಎಂಥಾ ದೊಡ್ಡ ಪಾಪಿಯಾಗಿದ್ದರೂ ನಮ್ಮ ಜೀವಿತ ಬದಲಾಗುತ್ತದೆ. ದೇವರು ಲೋಕಕ್ಕೆ ನಮ್ಮ ನೀತಿಯನ್ನು ಪ್ರಕಟಿಸುತ್ತಾನೆ. ದೇವರು ಅದು ಕೊಂಡವರ ಮೇಲೆ ಯಾರು ತಪ್ಪು ಹೊರಿಸಾರು? ದೇವರೇ ನಮ್ಮನ್ನು ನೀತಿವಂತರೆಂದು ನಿರ್ಣಯಿಸುವವನಾಗಿದ್ದಾನೆ. ಅಪರಾಧಿಗಳೆಂದು ನಿರ್ಣಯಿಸುವವರು ಯಾರು? ಕ್ರಿಸ್ತಯೇಸು ಮರಣವನ್ನು ಹೊಂದಿದ್ದಲ್ಲದೇ ಜೀವಿತನಾಗಿ ಎದ್ದು ದೇವರ ಬಲಗಡೆಯಲ್ಲಿದ್ದು ನಮಗೋಸ್ಕರ ಬೇಡುವವನಾಗಿದ್ದಾನೆ. (ರೋಮ. 8:33–34). ಕ್ರಿಸ್ತನಲ್ಲಿದ್ದು ನಿಮ್ಮ ಜೀವಿತ ಬದಲಾದರೂ ಲೋಕವು ನಿಮ್ಮನ್ನು ಹಳೆಯ ಜೀವಿತದ ಮೂಲಕವಾಗಿಯೇ ಗುರುತಿಸುತ್ತಾ ಇರಬಹುದು. ಸೋತು ಹೋಗಬೇಡಿ, ನಿರಾಶರಾಗಬೇಡಿ ದೇವರು ತಾನೇ ನಿಮ್ಮ

ದೇವರ ಪ್ರತಿಯೊಂದು ಮಾತು ಶುದ್ಧವಾದದ್ದು; ಆತನು ಶರಣಾಗತರಿಗೆ ಗುರಾಣಿಯಾಗಿದ್ದಾನೆ (ರೋಮ. ೩೦:೫).

ನೀತಿಯು ಪ್ರಕಾಶಕ್ಕೆ ಬರುವಂತೆ ಮಾಡುವವನಾಗಿದ್ದಾನೆ. **"ನನ್ನ ಪ್ರಾಣವನ್ನು ಉಜ್ಜೀವಿಸಮಾಡಿ ತನ್ನ ಹೆಸರಿಗೆ ತಕ್ಕಂತೆ ನೀತಿ ಮಾರ್ಗದಲ್ಲಿ ನಡೆಸುತ್ತಾನೆ"** (ಕೀರ್ತ. 23:3).

2) **ಪ್ರತಾಪವುಳ್ಳ ವಸ್ತ್ರ** (ಯೆಶಾ. 52:1). ಚೀಯೋನೇ, ಎಚ್ಚರಗೊಳ್ಳು, ಎಚ್ಚರಗೊಳ್ಳು, ನಿನ್ನ ಪ್ರತಾಪವನ್ನು ಧರಿಸಿಕೋ! ಕರ್ತನು ಪ್ರತಾಪವುಳ್ಳ ವಸ್ತ್ರವನ್ನು ನಮಗೆ ತೊಡಿಸುತ್ತಾನೆ. ಆಗ ಕರ್ತನಿಗಾಗಿ ಅದ್ಭುತಗಳನ್ನು, ಪರಾಕ್ರಮ ಕೃತ್ಯಗಳನ್ನು ಮಾಡುತ್ತೇವೆ. ಅ.ಕೃ. 10:38 ದೇವರು ನಜರೇತಿನ ಯೇಸುವನ್ನು ಪವಿತ್ರಾತ್ಮದಿಂದಲೂ ಬಲದಿಂದಲೂ ಅಭಿಷೇಕಿಸಿದನು. ದೇವರು ಆತನ ಸಂಗಡ ಇದ್ದುದರಿಂದ ಆತನು ಉಪಕಾರಗಳನ್ನು ಮಾಡುತ್ತಾ ಸೈತಾನನಿಂದ ಭಾದಿಸಲ್ಪಡುತ್ತಿರುವವರನ್ನು ಗುಣಮಾಡುತ್ತಾ ಸಂಚರಿಸಿದನು. ಇದೆಲ್ಲಾ ನಿಮಗೆ ಗೊತ್ತಾಗಿರುವುದಷ್ಟೇ. ಪ್ರತಾಪವುಳ್ಳ ವಸ್ತ್ರ ಅಂದರೆ ಪರಿಶುದ್ಧಾತ್ಮನ ಅಭಿಷೇಕ **"ಪವಿತ್ರಾತ್ಮನು ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೂದಾಯ, ಸಮಾರ್ಯ, ಯೆರೂಸಲೇಮು ಹಾಗೂ ಪ್ರಪಂಚದ ಕಟ್ಟಕಡೆಗಳಲ್ಲಿ ನನಗೆ ಸಾಕ್ಷಿಗಳಾಗಿರುವಿರಿ"** (ಅ.ಕೃ. 1:8). ಪವಿತ್ರಾತನೆಂಬ ಅಭಿಷೇಕದ ವಸ್ತ್ರ ಶಿಷ್ಯರ ಮೇಲೆ ಬಂದಾಗ ಸಾಮಾನ್ಯ ಮನುಷ್ಯರಾಗಿದ್ದ ಅವರು ಅಸಾಮಾನ್ಯ ಮನುಷ್ಯರಾಗಿ ಬದಲಾದರು. ಶಿಷ್ಯರ ಸೇವೆಯ ಮೂಲಕ ಅದ್ಭುತಗಳು ನಡೆದವು, ಕುಂಟರು ನಡೆದರು, ಪರ್ಶ್ವಾವಾಯು ರೋಗಿಗಳು ಸೌಖ್ಯ ಹೊಂದಿದರು, ಕುರುಡರು ನೋಡಿದರು, ಕಿವುಡರು ಕೇಳಿದರು, ಮೂಕರು ಮಾತನಾಡಿದರು, ಸತ್ತವರು ಎದ್ದು ಬಂದರು, ದುರಾತ್ಮ ಪೀಡಿತರು ಬಿಡುಗಡೆ ಹೊಂದಿದರು. ಅಂಧಕಾರದ ರಾಜ್ಯವನ್ನು ನಾಶಮಾಡಿ ಬೆಳಕಿನ ರಾಜ್ಯವಾದ ದೇವರ ರಾಜ್ಯವನ್ನು ಕಟ್ಟಿದರು. ಪವಿತ್ರಾತ್ಮ ನಿಮ್ಮಲ್ಲಿ ಬರುವಾಗ ನೀವು ಪ್ರತಾಪವನ್ನು ಧರಿಸಿ ಕರ್ತನಿಗಾಗಿ ಶೂರ ಕೃತ್ಯಗಳನ್ನು ಮಾಡುತ್ತೀರಿ.

ಒಬ್ಬ ಪೋಲಿಸ್ ಅಧಿಕಾರಿ ಮನೆಯಲ್ಲಿರುವಾಗ ಸಾಮಾನ್ಯವಾಗಿರುತ್ತಾನೆ. ಆದರೆ ಯಾವಾಗ ಡ್ಯೂಟಿಯಲ್ಲಿರುತ್ತಾನೋ ಸಮವಸ್ತ್ರಧರಿಸಿಕೊಂಡು ಬರುತ್ತಾನೆ. ಆತನಿಗೆ ಒಂದು ಬಲ ಬಂದ ಹಾಗೆ ಆತನು ಗಂಭೀರವಾಗಿರುತ್ತಾನೆ. ಯಾಕೆಂದರೆ ಸರ್ಕಾರವು ಆತನಿಗೆ ಅಧಿಕಾರ ಕೊಟ್ಟಿರುತ್ತದೆ. ಒಬ್ಬ ಸಾಮಾನ್ಯ ಪೋಲಿಸ್ ಅಧಿಕಾರಿ ಸಮವಸ್ತ್ರ ಧರಿಸಿಕೊಂಡಾಗ ಈ ರೀತಿಯ ಬಲ, ಅಧಿಕಾರ, ಗಂಭೀರತೆ ಇರುವುದಾದರೆ ದೇವರ ಮಕ್ಕಳಾದ ನಾವು ಪ್ರತಾಪವುಳ್ಳ ವಸ್ತ್ರವಾದ ಪವಿತ್ರಾತ್ಮನ ಅಭಿಷೇಕ ಹೊಂದಿದಾಗ ಕರ್ತನಿಗಾಗಿ ಮಹಾತ್ಕಾರ್ಯಗಳನ್ನು ಮಾಡುತ್ತೇವೆ.

3) ಸ್ತುತಿಯ ವಸ್ತ್ರ (ಯೆಶಾ. 61:3, 43:21).

4) ಜರತಾರಿ ವಸ್ತ್ರ (ಕೀರ್ತ. 45:13).

5) ಪ್ರಕಾಶಮಾನವಾದ ನಿರ್ಮಲವಸ್ತ್ರ (ಪ್ರಕ. 19:8).

6) ಕಸ್ತೂತಿ ಕೆಲಸದ ವಸ್ತ್ರ (ಕೀರ್ತ. 45:14).

7) ಶುಭವಸ್ತ್ರ (ಪ್ರಕ. 4:5).

8) ಯೇಸುವನ್ನು ಧರಿಸುವುದು (ಗಲಾ. 3:27).

9) ಆತ್ಮೀಕ ಗುಣಗಳನ್ನು ಧರಿಸುವುದು (ಕೊಲೊ. 3:12).

ಮುಂದುವರಿಯುವದು.........

**ಪಾ|| ಸುನಿಲ್ ಜಾನ್ ಡಿ'ಸೋಜಾ.**


**ಆಶ್ರಮದ ಅವಶ್ಯಕತೆಗಳು**

1. **30 ಟೇಬಲ್**
2. **60 ಬೆಂಚ್**
3. **ಟೆಂಪೋ ಟ್ರಾವಲ್ಸ್**
4. **ಅಕ್ಕಿ, ಸಕ್ಕರೆ, ದವಸಧಾನ್ಯ**
5. **50 ಮಂಚ**
6. **50 ಹಾಸಿಗೆ**
7. **50 ದಿಂಬು**
8. **50 ಬೆಡ್ ಶೀಟ್**
9. **50 ಹೊದಿಕೆ**

**ದಾನಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :**

**9902334941, 08202002781, 09964070654.**


ಆತನು ನನ್ನ ಮಾರ್ಗವನ್ನು ಸರಾಗಮಾಡುತ್ತಾನೆ. ನನ್ನ ಕಾಲನ್ನು ಜಿಂಕೆಯ ಕಾಲಿನಂತೆ ಚುರುಕುಮಾಡುತ್ತಾನೆ ( ಸಮು. 22:33).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 7760139148**

**ಓದುಗರಿಗೆ ವಿಶೇಷ ಸೂಚನೆ :**

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ <u>ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ</u> ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,
ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115 ಕರ್ನಾಟಕ, ಭಾರತ.
e: Editor_voiceofgod@hotmail.com
Website : www.divinegen.org www.dgmbethelchurch.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: (0820) 2589070, 200 2781
E-mial: dgmofficial@gmail.com

## ಮಹಿಳೆಯರ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**2) ದೇವರು ನಮ್ಮನ್ನು ಪ್ರೀತಿಸುತ್ತಾನೆ :** (ಯೆರೆ. 31:3, ಯೆಶಾ. 54:10). **ನಾನು ನಿಮ್ಮನ್ನು ಪ್ರೀತಿಸಿರುವುದು ಶಾಶ್ವತ ಪ್ರೇಮದಿಂದಲೇ ಆದಕಾರಣ ನಿನ್ನನ್ನು ಮಮತೆಯಿಂದ ಸೆಳೆದುಕೊಂಡಿದ್ದೇನೆ.** ಪ್ರೀತಿ ಅಂದರೆ ಅದು ಕ್ರಿಯೆಯಲ್ಲಿ ಆಗುವಂತದ್ದು. ಕರ್ತನಾದ ಯೇಸುಕ್ರಿಸ್ತನು ಪ್ರೀತಿಯನ್ನು ಕ್ರಿಯೆಯಲ್ಲಿ ತೋರಿಸಿದನು. (1 ಯೋಹಾ. 3:18) ಪ್ರಿಯರಾದ ಮಕ್ಕಳೇ ನಾವು ಬರೀ ಮಾತಿನಿಂದಾಗಲಿ ಬಾಯುಪಚಾರ ದಿಂದಾಗಲಿ ಪ್ರೀತಿಸುವವರಾಗಿರಬಾರದು. ನಿಮ್ಮ ಪ್ರೀತಿಯು ಕೃತ್ಯದಲ್ಲಿಯೂ ಸತ್ಯದಲ್ಲಿಯೂ ತೋರಬೇಕು. ಯಾಕೋ. 2:14–17 ನನ್ನ ಸಹೋದರರೇ, ಒಬ್ಬನು ತನಗೆ ನಂಬಿಕೆಯುಂಟೆಂದು ಹೇಳಿಕೊಂಡು ತಕ್ಕ ಕ್ರಿಯೆಗಳಿಲ್ಲದ ವನಾಗಿದ್ದರೆ ಪ್ರಯೋಜನವೇನು? ಅಂಥ ನಂಬಿಕೆ ಇವನನ್ನು ರಕ್ಷಿಸುವುದೋ? ಒಬ್ಬ ಸಹೋದರನಿಗೆ ಇಲ್ಲವೇ ಒಬ್ಬ ಸಹೋದರಿಗೆ ಬಟ್ಟೆಯೂ ಆ ದಿನದ ಆಹಾರವೂ ಇಲ್ಲದೇ ಇರುವಾಗ ನಿಮ್ಮಲ್ಲಿ ಒಬ್ಬನು ಅವರಿಗೆ ದೇಹಕ್ಕೆ ಬೇಕಾದದ್ದನ್ನು ಕೊಡದೆ ಸಮಾಧಾನ ದಿಂದ ಹೋಗಿರಿ ಬೆಂಕಿ ಕಾಯಿಸಿ ಕೊಳ್ಳಿ ಹೊಟ್ಟೆ ತುಂಬಿಸಿಕೊಳ್ಳಿ ಎಂದು ಬರೀ ಮಾತು ಹೇಳಿದರೆ ಪ್ರಯೋಜನವೇನು ಹಾಗೆಯೇ ಕ್ರಿಯೆಗಳಿಲ್ಲ ದಿದ್ದರೆ ನಂಬಿಕೆಯು ತನ್ನಲ್ಲಿ ಜೀವವಿಲ್ಲದ್ದು.

**ಸತ್ಯವೇದದಲ್ಲಿ 4 ವಿಧವಾದ ಪ್ರೀತಿಯಿದೆ :** ಗ್ರೀಕ್‌ನಲ್ಲಿ 4 ಪದಗಳನ್ನು ಕೊಡಲ್ಪಟ್ಟಿದೆ.

1) ಸ್ಟೋರ್‌ಕೇ (Storke) ಮಮತೆಯ ಪ್ರೀತಿ. ತಂದೆ–ತಾಯಿ–ಮಕ್ಕಳು, ಅಣ್ಣ–ತಮ್ಮ–ಸಹೋದರ–ಸಹೋದರಿ, ಮಕ್ಕಳು–ತಂದೆ ತಾಯಿ ಮಧ್ಯದಲ್ಲಿರುವ ಪ್ರೀತಿ.

2) ಫಿಲೋಸ್ (Philos) : ಸ್ನೇಹದ ಪ್ರೀತಿ ಸ್ನೇಹಿತರ ಮಧ್ಯದಲ್ಲಿರುವ ಪ್ರೀತಿ.

3) ಈರೋಸ್ (Eros) ಮೋಹದ ಪ್ರೀತಿ (ಶಾರೀರಿಕ ಪ್ರೀತಿ) ಗಂಡ ಹೆಂಡತಿ ಮಧ್ಯದಲ್ಲಿರುವ ಪ್ರೀತಿ.

4) ಅಗಾಪೆ (ದೈವೀಕ ಪ್ರೀತಿ) ದೇವರು ಲೋಕದ ಮನುಷ್ಯರ ಮೇಲೆ ಇಟ್ಟಂತಹ ಪ್ರೀತಿ ಇದು ತ್ಯಾಗದ ಪ್ರೀತಿ ಇದು ಸ್ವಾರ್ಥವಿಲ್ಲದ ಪ್ರೀತಿ ಇದು ಪರಿಶುದ್ಧ ಪ್ರೀತಿ.

   ಮನುಷ್ಯನ ಪ್ರೀತಿಯಲ್ಲಿ ಏನಾದರೂ ಸ್ವಾರ್ಥ (expectation) ತುಂಬಿರುತ್ತದೆ. ಆದರೆ ದೇವರ ಪ್ರೀತಿಯಲ್ಲಿ ಯಾವುದೇ ಸ್ವಾರ್ಥವಿಲ್ಲ, ಯಾವುದೇ ಕಳಂಕವಿಲ್ಲ ಅದು ಶುದ್ಧವಾದ ಪ್ರೀತಿಯಾಗಿದೆ.

3) **ದೇವರು ನಮ್ಮ ಬಗ್ಗೆ ಹಿತವಾಗಿ ಯೋಚಿಸುತ್ತಾನೆ : "ಇವರಿಗೆ ಗತಿಯಾಗಲಿ, ನಿರೀಕ್ಷೆಯಿರಲಿ ಎಂದು ನಾನು ನಿಮ್ಮ ವಿಷಯದಲ್ಲಿ ಮಾಡಿಕೊಳ್ಳುತ್ತಿರುವ ಆಲೋಚನೆಗಳನ್ನು ನಾನೇ ಬಲ್ಲೆನು; ಅವು ಅಹಿತದ ಯೋಚನೆಗಳಲ್ಲ, ಹಿತದ ಯೋಚನೆಗಳೇ"** (ಯೆಶಾ. 29:11). ಅನೇಕ ಸಲ ನಮ್ಮ ಬಗ್ಗೆ ಯಾರೂ ಕಾಳಜಿ ವಹಿಸುತ್ತಾರೆ, ನಮ್ಮ ಬಗ್ಗೆ ಯಾರಿಗೆ ಅಕ್ಕರೆ ಇದೆ, ನಮ್ಮ ಭವಿಷ್ಯವೇನು, ಕೆಲಸ ಹೋದರೆ ಏನು ಮಾಡುವದು, ವ್ಯಾಪಾರದಲ್ಲಿ ನಷ್ಟ ಹೊಂದಿದರೆ ಏನು ಮಾಡುವುದು, ನನ್ನ ಮಗಳಿಗೆ ಹುಡುಗ ಸಿಗುತ್ತಾನೋ? ಸಿಕ್ಕಿದರೆ ಒಳ್ಳೇ ಹುಡುಗ ಸಿಗುತ್ತಾನೋ? ನನಗೆ ಮಕ್ಕಳಾಗಬಹುದಾ? ನನ್ನ ಸಾಲ ತೀರಬಹುದಾ? ಹೀಗೆ ಅನೇಕ ವಿಷಯದಲ್ಲಿ ನಾವು ಚಿಂತಿಸುತ್ತೇವೆ. (1 ಪೇತ್ರ 5:7) ಪ್ರಿಯ ಸಹೋದರ, ಸಹೋದರಿಯೇ, ಪ್ರಿಯ ಮಕ್ಕಳೇ, ಪ್ರಿಯ ತಂದೆ ತಾಯಿಯವರೇ ನಿಮಗಾಗಿ ಯೋಚಿಸುವ, ಚಿಂತಿಸುವ ಒಬ್ಬ ದೇವರಿದ್ದಾನೆ ಆತನೇ ಕರ್ತನಾದ ಯೇಸುಕ್ರಿಸ್ತನು.

4) **ದೇವರು ನಮ್ಮ ಪ್ರಾರ್ಥನೆಗೆ ಉತ್ತರಿಸುತ್ತಾನೆ** (ಯೋಹಾ. 14:14, 15:16). ನೀವು ನನ್ನ ಹೆಸರಿನಲ್ಲಿ ನನ್ನನ್ನು ಏನಾದರೂ ಬೇಡಿಕೊಂಡರೆ ಅದನ್ನು ನೇರವೇರಿಸುವೆನು. ಯೋಹಾ. 16:23–24 ಆ ದಿನದಲ್ಲಿ ನೀವು ನನಗೆ ಯಾವ ಪ್ರಶ್ನೆಯನ್ನು ಮಾಡುವುದಿಲ್ಲ ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನೀವು ತಂದೆಯನ್ನು ಏನಾದರೂ ಬೇಡಿಕೊಂಡರೆ ಅದನ್ನು ಆತನು ನನ್ನ ಹೆಸರಿನ ಮೇಲೆ ನಿಮಗೆ ಕೊಡುವನು. ನೀವು ಇದುವರೆಗೆ ನನ್ನ ಹೆಸರಿನ ಮೇಲೆ ಯಾವುದೊಂದನ್ನು ಬೇಡಿಕೊಂಡಿಲ್ಲ. ಬೇಡಿಕೊಳ್ಳಿರಿ. ನಿಮಗೆ ಸಿಕ್ಕುವುದು ಆಗ ನಿಮ್ಮ ಆನಂದವು ಪರಿಪೂರ್ಣವಾಗುವುದು. ಆತನು ಜೀವವುಳ್ಳ ದೇವರಾಗಿರುವುದರಿಂದ ನಮ್ಮ ಎಲ್ಲಾ ಪ್ರಾರ್ಥನೆಗಳಿಗೆ ಉತ್ತರಕೊಡುತ್ತಾನೆ.

5) **ದೇವರು ಮನುಷ್ಯನ ಹಾಗೆ ಎರಡು ಮಾತಿನವನಲ್ಲ:** (1 ಸಮು. 15:29). ಇಸ್ರಾಯೇಲರ ನಿತ್ಯಧಾರನು

ಯೆಹೋವನಿಗೆ ಮೊರೆಯಿಡುವವರು ಯಥಾರ್ಥವಾಗಿ ಮೊರೆಯಿಡುವವರಾದರೆ ಆತನು ಹತ್ತಿರವಾಗಿಯೇ ಇದ್ದಾನೆ (ಕೀರ್ತ. 145:18).

ಸುಳ್ಳಾಡುವವನಲ್ಲ, ಪಶ್ಚಾತ್ತಾಪ ಪಡುವವನಲ್ಲ, ಯಾಕಂದರೆ ಆತನು ಪಶ್ಚಾತ್ತಾಪ ಪಡುವ ಮನುಷ್ಯನಲ್ಲ ಎಂದು ಹೇಳಿದನು. ಅರ. 23:19 ದೇವರು ಮನುಷ್ಯನಂತೆ ಎರಡು ಮಾತಿನವನಲ್ಲ, ಮಾನವನಂತೆ ಮನಸ್ಸನ್ನು ಬೇರೆ ಮಾಡಿಕೊಳ್ಳುವವನಲ್ಲ, ತಾನು ಹೇಳಿದ ಮೇರೆಗೆ ನಡೆಯುವುದಿಲ್ಲವೋ? ಮಾತು ಕೊಟ್ಟ ನಂತರ ನೇರವೇರಿಸುವುದಿಲ್ಲವೋ. ಮನುಷ್ಯರಲ್ಲಿ ಅನೇಕರು ಮಾತು ಕೊಡುತ್ತಾರೆ ಹಾಗೂ ತಕ್ಷಣ ಮಾತನ್ನು ನೇರವೇರಿಸದೇ ಮರೆತು ಹೋಗುತ್ತಾರೆ. ನಮ್ಮ ದೇವರು ಹಾಗೆ ಅಲ್ಲ. **"ಆತನು ಇಸ್ರಾಯೇಲರಿಗೆ ಮಾಡಿದ ಅತೀ ಶ್ರೇಷ್ಟ ವಾಗ್ದಾನಗಳಲ್ಲಿ ಒಂದೂ ತಪ್ಪಿ ಹೋಗಲಿಲ್ಲ ಎಲ್ಲಾ ನೆರವೇರಿದವು"** (ಯೆಹೋ. 21:45).

ಕರ್ತನು ನಿನ್ನ ಜೀವಿತದಲ್ಲಿ ಅನೇಕ ಪ್ರವಾದಿಗಳ ಮೂಲಕವೋ, ದರ್ಶನಗಳ ಮೂಲಕವೋ, ಕನಸುಗಳ ಮೂಲಕವೋ, ಆತನ ವಾಕ್ಯದ ಮೂಲಕವೋ ಏನೆಲ್ಲಾ ಹೇಳಿದ್ದಾನೋ ಅದನ್ನು ಆತನು ನಿನ್ನ ಜೀವಿತದಲ್ಲಿ ನೆರವೇರಿಸಲು ಶಕ್ತನು. 1997 ರಲ್ಲಿ ನನ್ನ ಪತಿಯವರು ಬಹರೈನ್‌ನಲ್ಲಿ ಕೆಲಸ ಮಾಡುವಾಗ ಕರ್ತನಾದ ಯೇಸುಕ್ರಿಸ್ತನು ಅವರಿಗೆ ಅವರು ಹುಟ್ಟಿದ ಸ್ವಂತ ಊರಿನಲ್ಲಿ ಕರ್ತನ ಸೇವೆ ಮಾಡಬೇಕೆಂದು ಪ್ರೇರೆಪಿಸಿದನು. **"ದೇವರೇ ತನ್ನ ಸುಚಿತ್ತವನ್ನು ನೆರವೇರಿಸಬೇಕೆಂದು ನಿಮ್ಮಲ್ಲಿ ಉದ್ದೇಶವನ್ನು ಪ್ರಯತ್ನವನ್ನು ಉಂಟು ಮಾಡುವವನಾಗಿದ್ದಾನೆ"** (ಫಿಲಿ. 2:13). ಆದರೆ ನನ್ನ ಪತಿಯವರು ಕರ್ತನ ಪರಿಪೂರ್ಣ ಚಿತ್ತವನ್ನು ತಿಳಿದುಕೊಳ್ಳಲು 40 ದಿವಸ ಕೇವಲ ಪಾನೀಯದಲ್ಲಿ ಮಾತ್ರ ಉಪವಾಸ ಪ್ರಾರ್ಥನೆ ಮಾಡಿದರು. ಆಗ ದೇವರು 2 ಕಾರ್ಯ ಮಾಡಿದನು. ಒಂದು ಕರ್ತನ ಶ್ರೇಷ್ಠ ಸೇವಕರಾದ ಮೊರಿಸ್‌ರುಲ್ಲೊರವರ ಮೂಲಕ ನನ್ನ ಪತಿಯವರ ಭವಿಷತ್ಕಾಲದ ಸೇವೆ ಕುರಿತು ಮಾತನಾಡಿದರು. 2) ನನ್ನ ಪತಿಯವರು ಒಂದು ದಿನ ಪ್ರಾರ್ಥನೆಯಲ್ಲಿರುವಾಗ ದೂರದರ್ಶನದಲ್ಲಿ ನೋಡುವ ಹಾಗೆ ಒಂದು ದರ್ಶನವನ್ನು ಕರ್ತನು ಅವರಿಗೆ ತೋರಿಸಿದನು. ಅದರಲ್ಲಿ ಈಗ ಸೇವೆಮಾಡುತ್ತಿರುವಂತಹ ಅನೇಕ ಸ್ಥಳಗಳನ್ನು ಕರ್ತನು ತೋರಿಸಿ ಈ ಎಲ್ಲಾ ಸ್ಥಳಗಳನ್ನು ನಿನ್ನ ಸೇವೆಗೆ ಕೊಡುತ್ತೇನೆ. ನಿನಗೆ ಅಪೋಸ್ತಲ ಸೇವೆ ಕೊಟ್ಟಿದ್ದೇನೆ. ನಿನ್ನ ಮೂಲಕ ಅನೇಕ ಸಭೆಗಳನ್ನು ಸ್ಥಾಪಿಸುತ್ತೇನೆ, ಅನೇಕ ಅನಾಥಾಶ್ರಮಗಳನ್ನು ನೀನು ಸ್ಥಾಪಿಸುವಿ ಹಾಗೂ ರಸ್ತೆ ಬದಿಯಲ್ಲಿರುವ ಅನೇಕ ಮಾನಸಿಕ ಅಸ್ವಸ್ಥರನ್ನು ನೀನು ಕರೆದುಕೊಂಡು ಬರುವಿ ಅವರಿಗೆ ನಾನು ಸೌಖ್ಯವನ್ನು ಕೊಡುವೆನು. ಕರ್ತನು ಈ ದಿವಸಗಳಲ್ಲಿ ಈ ಎಲ್ಲಾ ವಾಗ್ದಾನಗಳನ್ನು ಅನುಭವದಲ್ಲಿ ತಂದಿದ್ದಾನೆ. 2002ನೇ ಇಸವಿಯಲ್ಲಿ ಅನೇಕ ದೇವ ಸೇವಕರು ಪ್ರವಾದಿಸಿ ನನ್ನ ಗಂಡನಿಗೆ ಹೇಳಿದರು ನಿನ್ನನ್ನು ಅನೇಕ ದೇಶಗಳಿಗೆ ಕರೆದುಕೊಂಡು ಹೋಗಿ ನನ್ನ ಸೇವೆಯಲ್ಲಿ ಉಪಯೋಗಿಸುತ್ತೇನೆ. ಬಸ್ಸುಗಳನ್ನು ಬದಲಾಯಿಸಿದ ಹಾಗೆ ಅನೇಕ ವಿಮಾನಗಳನ್ನು ಬದಲಾಯಿಸಿ ಸೇವೆಗಾಗಿ ಪ್ರಯಾಣ ಮಾಡುವಿ. 2005ನೇ ಇಸವಿಯಿಂದ ಈವರೆಗೆ ಕರ್ತನು ಬಿಡುವಿಲ್ಲದೆ (ಪುರುಸೊತ್ತಿಲ್ಲದೆ) ಆತನ ಮಹಿಮೆಗಾಗಿ ಆತನ ಸೇವೆಯಲ್ಲಿ ನನ್ನ ಗಂಡನನ್ನು ಉಪಯೋಗಿಸುತ್ತಿರುವನು. **"ತಾನು ವಾಗ್ದಾನ ಮಾಡಿದಂತೆ ತನ್ನ ಪ್ರಜೆಗಳಾದ ಇಸ್ರಾಯೇಲರಿಗೆ ವಿಶ್ರಾಂತಿಯನ್ನು ಅನುಗ್ರಹಿಸಿದ ಯೆಹೋವನಿಗೆ ಸ್ತೋತ್ರವಾಗಲಿ. ಆತನು ತನ್ನ ಸೇವಕನಾದ ಮೋಶೆಯು ಮುಖಾಂತರವಾಗಿ ಮಾಡಿದ ಅತೀ ಶ್ರೇಷ್ಠವಾಗ್ದಾನಗಳಲ್ಲಿ ಒಂದೂ ತಪ್ಪಿ ಹೋಗಲಿಲ್ಲ"** (1 ಅರಸು. 8:56).

ಮುಂದುವರಿಯುವುದು.....

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು
ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**– ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**


## ದೇವರ ಸ್ವರ ಮಾಸಪತ್ರಿಕೆಯ ಪರಿಷ್ಕರಿಸಲ್ಪಟ್ಟ ಜಾಹೀರಾತಿನ ದರಗಳು

| | | |
|---|---|---|
| **Back Page Colour (Full)** | : | **5,000/-** |
| **Front Inner Page Colour (Full)** | : | **3,500/-** |
| **Back Inner Page Colour (Full)** | : | **2,500/-** |
| **Inside B/W (Full Page)** | : | **800/-** |


ಮುರಿದ ಮನಸ್ಸುಳ್ಳವರನ್ನು ವಾಸಿಮಾಡುತ್ತಾನೆ; ಅವರ ಗಾಯಗಳನ್ನು ಕಟ್ಟುತ್ತಾನೆ
(ಕೀರ್ತ. 147:3).

ಆರೋಗ್ಯ ಸ್ವರ

## ಕೇಶ ಪೋಷಣೆ :

ಸ್ತ್ರೀ ಆಗಲೀ, ಪುರುಷರಾಗಿರಲಿ ಅವರ ಕೇಶ ಅವರ ಸೌಂದರ್ಯದ ಪ್ರತೀಕವಾಗಿರುತ್ತದೆ. ಅವರ ಸೌಂದರ್ಯವನ್ನು ಹೆಚ್ಚಿಸುವಲ್ಲಿ ಕೂದಲಿನ ಪಾತ್ರ ಬಹುದೊಡ್ಡದು. ಇತ್ತೀಚಿನ ದಿನಗಳಲ್ಲಂತೂ ಪ್ರತಿಂಯೊಬ್ಬರೂ ಸೌಂದರ್ಯ ಪ್ರಿಯರಾಗಿದ್ದಾರೆ. ಹಾಗಾಗಿಯೇ ರಸ್ತೆಗೆ 4ರಂತೆ ಬ್ಯೂಟಿ ಸೆಲೂನ್‌ಗಳು ತಲೆ ಎತ್ತಿವೆ. ಜನರ ಅಗತ್ಯಕ್ಕೆ ತಕ್ಕಂತೆ ಪಂಚತಾರಾ ಸೆಲೂನ್‌ಗಳು, ಹವಾನಿಯಂತ್ರಿತ ಸಲೂನ್‌ಗಳು ತಲೆ ಎತ್ತಿವೆ. ಆದರೆ ಆಧುನಿಕತೆಯ ಅನೇಕ ರಾಸಾಯನಿಕ ಹಾಗೂ ಭಯಾನಕ ಅಡ್ಡ ಪರಿಣಾಮಗಳನ್ನು ಹೊಂದಿರುವ ಚಿಕಿತ್ಸೆಗಳನ್ನು ಮಾಡಿಸಿಕೊಳ್ಳುತ್ತಾರೆ. ಅನೇಕ ಸ್ಪಾ ಮತ್ತು ಸೆಲೂನ್‌ಗಳಲ್ಲಂತೂ ಪ್ರತಿಸಾರಿ ಹೋದಾಗಲೆಲ್ಲ ರೂಟಿಂಗ್. ಕಂಡೀಶನಿಂಗ್ ಮಾಡಿಸಿ ನಂತರವೇ ಹೇರ್‌ಕಟ್ ಮಾಡಿಸಿಕೊಳ್ಳಲು ಪ್ರೇರೇಪಿಸುತ್ತಾರೆ. ಸಾವಿರಾರು ರೂ. ಕೊಟ್ಟು ಮಾಡಿಸಿಕೊಳ್ಳುವುದಲ್ಲದೇ ಅನೇಕ ಅಡ್ಡಪರಿಣಾಮಗಳೂ ಎದುರಾಗುತ್ತವೆ. ಅಂದರೆ ಕೂದಲು ಉದುರುವುದು, ಕಣ್ಣು ಉರಿಯುವದು, ಚರ್ಮದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಕಾಲ ಎಷ್ಟೇ ಬದಲಾದರೂ ವಾಸ್ತವ ಒಂದೇ. ಯಾವುದು ನೈಸರ್ಗಿಕವೋ ಅದೇ ಶಾಶ್ವತ. ಹಾಗಾಗಿ ನಿಮ್ಮ ಕೂದಲು ಗುಂಗುರು ಅಥವಾ ವೇವಿಯಾಗಿದ್ದರೆ ಅದು ನೈಸರ್ಗಿಕವಾಗಿ ನಿಮ್ಮ ದೇಹದ ಪ್ರಕೃತಿ ಆಗಿರುತ್ತದೆ. ಕ್ಷಣಿಕ ಸೌಂದರ್ಯಕ್ಕೆ ಮಾರು ಹೋಗಿ ಶಾಶ್ವತವಾಗಿ ನೈಸರ್ಗಿಕ ಸೌಂದರ್ಯವನ್ನು ಕಳೆದುಕೊಳ್ಳಬೇಡಿ. ಬದಲಿಗೆ ನಿಮ್ಮ ವ್ಯಕ್ತಿತ್ವದಿಂದ ಹಾಗೂ ಆತ್ಮವಿಶ್ವಾಸದಿಂದ ಜಗತ್ತನ್ನು ಎದುರಿಸಿ. ಜೊತೆಗೆ ಈ ಕೆಳಗೆ ತಿಳಿಸಿರುವ ಕೆಲವು ಸಲಹೆಗಳನ್ನು ಪಾಲಿಸಿ.

* ಕೂದಲು ಬಹಳ ಒರಟಾಗಿದ್ದರೆ ರಾಸಾಯನಿಕ ಸಾಫ್ಟನಿಂಗ್ ಬದಲು ದಾಸವಾಳ ಹಾಗೂ ಬಸಳೇ ಸೊಪ್ಪನ್ನು ಅರೆದು ಕೂದಲಿಗೆ ಹಚ್ಚಿ.
* ಗುಂಗುರು ಕೂದಲಿರುವವರು ಸ್ಟ್ರೈಟನಿಂಗ್ ಬದಲು ಫ್ಲ್ಯಾಟನಿಂಗ್ ಕಟ್ ಮಾಡಿಸಿಕೊಳ್ಳಿ.
* ಮುಖ ಸ್ವಲ್ಪ ದಪ್ಪಗಿದ್ದರೆ ಟಿಂಚ್ ಕಟ್ ಮಾಡಿಸಿಕೊಳ್ಳಿ.
* ವಿನೂತನವಾಗಿ ಕಾಣಲು ವಾಲ್ಯೂಂ ಕಟ್ ಮಾಡಿಸಿ.
* 15 ರಿಂದ 20 ವರ್ಷದ ಯುವತಿಯರು ಶೋಲ್ಡರ್ ಬ್ಲಟ್ ಮಾಡಿಸಿದರೆ ಎಲ್ಲಾ ಉಡುಪುಗಳಿಗೂ ಹೊಂದುತ್ತದೆ.
* 20 ರಿಂದ 30 ವರ್ಷದವರು ವಾಲ್ಯೂಂ ಕಟ್ ಮಾಡಿಸಿದರೆ ಇನ್ನಷ್ಟು ಯುವಕರಂತೆ ಕಾಣಬಹುದು.
* 30 ವರ್ಷ ಮೇಲ್ಪಟ್ಟವರು ಬಾಟಂ ಲೇಯರ್ ಮಾಡಿಸಿದರೆ ಅವರ ಸೌಂದರ್ಯ ಮತ್ತಷ್ಟು ಹೆಚ್ಚುತ್ತದೆ.

ಹೀಗೆ ಕೇವಲ ಹೇರ್‌ಕಟ್‌ನಿಂದ ನಿಮ್ಮ ಸೌಂದರ್ಯವನ್ನು ಇಮ್ಮಡಿಗೊಳಿಸಬಹುದೇ ಹೊರತು, ರಾಸಾಯನಿಕ ಪ್ರಸಾಧಗಳಿಂದಲ್ಲ. ಹಾಗಾಗಿ ಉತ್ತಮ ಹೇರ್‌ಸ್ಟೈಲಿಸ್ಟ್ ಬಳಿ ಹೋಗಿ ಕೇವಲ ಹೇರ್‌ಕಟ್ ಮಾಡಿಸಿಕೊಳ್ಳಿ. ಚೆಂದ ಕಾಣಿ.

* ಈರುಳ್ಳಿ ಕತ್ತರಿಸುವಾಗ ಕಣ್ಣು ಮತ್ತು ಮೂಗಿನಲ್ಲಿ ನೀರು ಸುರಿಯುವುದು ಸಾಮಾನ್ಯ. ಹಾಂ! ಚ್ಯೂಯಿಂಗ್ ಗಮ್ ಜಗಿಯುತ್ತಾ ಈರುಳ್ಳಿ ಕತ್ತರಿಸಿದರೆ ಈ ತೊಂದರೆ ಮಾಯ! ಈರುಳ್ಳಿ ಅರ್ಧಕ್ಕೆ ಕತ್ತರಿಸಿ ತಣ್ಣೀರಿನಲ್ಲಿ 15 ನಿಮಿಷ ನೆನೆಸಿಟ್ಟು, ಬಳಿಕ ಕತ್ತರಿಸಿದರೆ ಕಣ್ಣು ಮೂಗಿನಲ್ಲಿ ನೀರು ಸುರಿಯುವುದಿಲ್ಲ.
* ಆಲೂಗಡ್ಡೆಯನ್ನು ಬೇಗನೆ ಬೇಯುವಂತೆ ಮಾಡಲು ಚೆನ್ನಾಗಿ ತೊಳೆದ ಒಂದು ಭಾಗದಲ್ಲಿ ಸಣ್ಣಗೆ ಸಿಪ್ಪೆ ತೆಗೆದು ಬಳಿಕ ಇಡಿಯಾಗಿ ಕುದಿಸಿ ನೀರಲ್ಲಿ ಕುಕ್ಕರ್‌ನಲ್ಲಿ ಬೇಯಿಸಿದರೆ ಬೇಗನೆ ಬೇಯುತ್ತದೆ. ಇಡೀ ಸಿಪ್ಪೆ ತೆಗೆದರೆ ಆಲೂಗಡ್ಡೆಯಲ್ಲಿರುವ ಪೊಟ್ಯಾಶಿಯಂ, ವಿಟಮಿನ್‌ಗಳು ಕಡಿಮೆಯಾಗುವುದರಿಂದ, ಇಡೀ ಸಿಪ್ಪೆ ತೆಗೆದು ಬೇಯಿಸಬಾರದು. ಸ್ವಲ್ಪ ಮಾತ್ರ ಸಿಪ್ಪೆತೆಗೆದು ಬೇಯಿಸುವುದರಿಂದ ಆಲೂಗಡ್ಡೆಯು ಬೇಗನೆ ಬೇಯುತ್ತದೆ. ಜೊತೆಗೆ ಸತ್ತ್ವವೂ ನಷ್ಟವಾಗುವುದಿಲ್ಲ.
* ಮಕ್ಕಳ ಬಟ್ಟೆಗೆ ಇಂಕ್ ಬಿದ್ದು ಕಲೆಯಾದರೆ ಆಗ, ಟೂಥ್‌ಪೇಸ್ಟ್‌ನ್ನು ಕಲೆಯ ಭಾಗಕ್ಕೆ ಹಚ್ಚಿ ಚೆನ್ನಾಗಿ ತಿಕ್ಕಿ ಒಣಗಿಸಬೇಕು. ಬಳಿಕ ಸೋಪ್ ನೀರಿನಲ್ಲಿ ಅದ್ದಿ ತಿಕ್ಕಿ ತೊಳದರೆ ಬಟ್ಟೆಯ ಇಂಕ್‌ನ ಕಲೆ ನಿವಾರಣೆಯಾಗುತ್ತದೆ.

– ಸಂಗ್ರಹ.

ಯೆಹೋವನು ಆನಂದಿಸುವದು ತನ್ನ ಕೃಪೆಯನ್ನು ನಿರೀಕ್ಷಿಸುವ ಭಕ್ತರಲ್ಲೇ (ಕೀರ್ತ. 147:11).

## ಡಿಜಿಎಮ್ ಬೇತೇಲ್ ಅಂಕಣ

- ಡಿಜಿಎಮ್ ಬೇತೇಲ್ ಸಭೆಯ ಸಹೋ॥ ಶ್ರೀಧರ್ ಹಾಗೂ ಸಂಧ್ಯಾ ದಂಪತಿಗಳಿಗೆ ದೇವರು ಹೆಣ್ಣು ಮಗುವನ್ನು ದಾನವಾಗಿ ಅನುಗ್ರಹಿಸಿರುತ್ತಾನೆ.
- ಪಾ॥ ಸುನಿಲ್ ಜಾನ್ ಡಿ'ಸೋಜಾರವರ ತಂದೆ ಜೋಸೇಫ್ ಡಿ'ಸೋಜಾರವರು ದಿನಾಂಕ. 30.09.13ರಂದು ಕರ್ತನಲ್ಲಿ ನಿದ್ರೆ ಹೊಂದಿರುತ್ತಾರೆ.
- ಡಿಸೆಂಬರ್ 02.12.2013 ರಿಂದ 11.12.2013ರವರೆಗೆ 10 ದಿವಸಗಳ ಕೇರಿತ್ ಶಕ್ತಿಯ ಹಾಗೂ ಬಿಡುಗಡೆಯ ಕೂಟಗಳು ಏರ್ಪಡಿಸಲಾಗಿದೆ.
- ನೂತನವಾಗಿ ಕಟ್ಟಲ್ಪಡುತ್ತಿರುವ ಪ್ರಾರ್ಥನಾ ಗೋಪುರಕ್ಕಾಗಿ ಪ್ರಾರ್ಥಿಸಿರಿ.
- ಪಾ॥ ಸುನಿಲ್‌ರವರು ಕುಟುಂಬವಾಗಿ ದೇಶ ವಿದೇಶಗಳಿಗೆ ಹೋಗಿ ಕರ್ತನ ಸೇವೆಯನ್ನು ಮಾಡಿ ಮರಳಿದ್ದಾರೆ.
- ಡಿಜಿಎಮ್ ಬೇತೇಲ್ ಶಂಕರಪುರ ಸಭೆಯ ಸಹಸೇವಕರಾದ ಪಾ॥ ಮ್ಯಾಥ್ಯು ಕ್ಯಾಸ್ತಲಿನೋರವರು ಕುಟುಂಬವಾಗಿ ಡಿಜಿಎಮ್ ಬೇತೇಲ್ ಬೆಂಗಳೂರು ಬ್ರಾಂಚ್ ಸಭೆಯಲ್ಲಿ ಕರ್ತನ ಸೇವೆಯನ್ನು ಮಾಡಿ ಹಿಂತಿರುಗಿದ್ದಾರೆ.
- ಡಿಜಿಎಮ್ ಬೇತೇಲ್ ಶಂಕರಪುರ ಸಭೆಯ ಸಹಸೇವಕರಾದ ಪಾ॥ ಪ್ರಶಾಂತ್ ಮಾಬೆನ್‌ರವರು ಕುಟುಂಬವಾಗಿ ಡಿಜಿಎಮ್ ಬೇತೇಲ್ ಬೆಂಗಳೂರು ಬ್ರಾಂಚ್ ಸಭೆಯಲ್ಲಿ ಕರ್ತನ ಸೇವೆಯನ್ನು ಮಾಡಿ ಹಿಂತಿರುಗಿದ್ದಾರೆ.

## ವಿಶೇಷ ಪ್ರಾರ್ಥನೆ :

ಪ್ರತಿ ತಿಂಗಳ ಮೊದಲನೇ ಶನಿವಾರ ಮಧ್ಯಾಹ್ನ 4–00ರಿಂದ 6–00 ಗಂಟೆಯವರೆಗೆ ಸ್ವಸ್ಥತೆಯ ಹಾಗೂ ಬಿಡುಗಡೆಯ ಆರಾಧನೆಯನ್ನು ಸಭಾಪಾಲಕರಾದ **ಸುನಿಲ್ ಜಾನ್ ಡಿ'ಸೋಜಾ** ಹಾಗೂ ತಂಡದವರ ನೇತೃತ್ವದಲ್ಲಿ ಡಿಜಿಎಮ್ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರದಲ್ಲಿ ನಡೆಯುತ್ತಿದೆ. ಆಸಕ್ತಿಯುಳ್ಳ ಪ್ರತಿಯೊಬ್ಬರಿಗೂ ಆದರದ ಸ್ವಾಗತ. ರೋಗಿಗಳಿಗಾಗಿ ವಿಶೇಷವಾಗಿ ಪ್ರಾರ್ಥಿಸಲಾಗುವುದು. ಬನ್ನಿರಿ ಯೇಸುಕ್ರಿಸ್ತನು ಮಾಡುವ ಅದ್ಭುತಗಳನ್ನು ಹೊಂದಿಕೊಳ್ಳಿರಿ.

**"ದೆವ್ವಹಿಡಿದ ಬಹಳ ಜನರನ್ನು ಆತನ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದನು"** (ಮತ್ತಾ. 8:16).

***ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :***

**9902334941, 9964070654**

ಆತನು ನಿನ್ನ ಪ್ರಾಂತದೊಳಗೆ ಸೌಭಾಗ್ಯವನ್ನುಂಟು ಮಾಡುತ್ತಾನೆ
(ಕೀರ್ತ. 147:14).

# ಜಾಹಿರಾತು

ನಿಮಗೆ ದೇವರ ವಾಕ್ಯದ ಟಿ–ಶರ್ಟ್ ಬೇಕಾದಲ್ಲಿ
ನಾವು ಮಾಡಿಕೊಡುತ್ತೇವೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :
**9902334941, 08202002781, 9844265602.**

## ಬೇಕಾಗಿದ್ದಾರೆ

24 ಗಂಟೆ ಪ್ರಾರ್ಥನಾ ಗೋಪುರದಲ್ಲಿ ಪ್ರಾರ್ಥಿಸುವ
ಪ್ರಾರ್ಥನಾ ವೀರರು ಬೇಕಾಗಿದ್ದಾರೆ.
ಊಟ, ವಸತಿ ಸೌಕರ್ಯವನ್ನು ನೀಡಲಾಗುವುದು.
ಪ್ರಾರ್ಥನೆ ಮಾಡಲು ಇಚ್ಚಿಸುವವರು

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :
**9902334941**

ನೀವು ನಮ್ಮ ಅನಾಥಾಶ್ರಮದಲ್ಲಿ ಸೇವೆ
ಮಾಡಲು ಇಷ್ಟಪಡುವುದಾದರೆ

ನಮ್ಮನ್ನು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :
**9902334941, 08202002781.**

ಶ್ರೇಷ್ಠವಾದ ಗೋದಿಯಿಂದ ನಿನ್ನನ್ನು ತೃಪ್ತಿಗೊಳಿಸುತ್ತಾನೆ
(ಕೀರ್ತ. 147:14).

**ಆದಿಕಾಂಡ ಪುಸ್ತಕದಿಂದ ಆಯ್ದುಕೊಂಡ ಪದಗಳು :**

**ಮಕ್ಕಳ ಸ್ವರ**


1) ದೇವರು ಎರಡನೇ ದಿನದಲ್ಲಿ ಏನನ್ನು ಉಂಟುಮಾಡಿದನು?
2) ದೇವರು ಮನುಷ್ಯನನ್ನು ಅಥವಾ ಮೃಗಗಳನ್ನು ಎಷ್ಟನೇ ದಿನದಲ್ಲಿ ಉಂಟುಮಾಡಿದನು?
3) "ಆದಾಮ" ಎಂಬುದರ ಅರ್ಥವೇನು?
4) "ಹವ್ವ" ಹೆಸರಿನ ಅರ್ಥವೇನು?
5) ದೇವರು ಉಂಟುಮಾಡಿದ ಎಲ್ಲಾ ಭೂಜಂತುಗಳಿಗೆ ಆದಾಮನು ಏನೆಂದು ಹೆಸರಿಟ್ಟನು?
6) "ನೋದು" ಎಂಬ ಪದದ ಅರ್ಥವೇನು?
7) ದನಕರುಗಳನ್ನು ಸಾಕುವವರಾಗಿದ್ದು ಗುಡಾರಗಳಲ್ಲಿ ವಾಸಿಸುವವರೆಲ್ಲರ ಮೂಲಪುರುಷನು ಯಾರು?
8) ಕಾಯಿನನನ್ನು ಕೊಂದವರು ಯಾರು?
9) "ಸೇತ ಎಂಬ ಹೆಸರಿನ ಅರ್ಥವೇನು ?
10) ಜಲಪ್ರಳಯಕ್ಕೆ ಮುಂಚೆ ಬದುಕಿದ ಹತ್ತು ಮಂದಿ ಪುರುಷರಲ್ಲಿ ಅತೀ ಕಡಿಮೆ ಆಯಸ್ಸು ಜೀವಿಸಿದ ವ್ಯಕ್ತಿ ಯಾರು ?

---

**ಅಕ್ಟೋಬರ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು :**

1. ಅಭಿಷಿಕ್ತನು ಅಥವಾ ಅಭಿಷೇಕಿಸಲ್ಪಟ್ಟವನು (ಯೋಹಾ. 1:42).
2. ಸಿಲೋವ ಕೊಳ (ಯೋಹಾ. 9:6–7)
3. ತೋಮನು (ಯೋಹಾ. 20:25).
4. ಆದಾ, ಚಿಲ್ಲಾ (ಆದಿ. 4:19–23).
5. ಯೂಬಾಲನು (ಆದಿ. 4:21).
6. ಯೆರೆದನ ಮಗನು (ಆದಿ. 5:18).
7. ಬೆನ್ಯಾಮೀನ್ (ಆದಿ. 35:18).
8. ಯೋತಾಮನು (2 ಪೂರ್ವ. 27:1).
9. ಗುರು ಅಥವಾ ಬೋಧಕನು (ಯೋಹಾ. 20:16).
10. ಹದೆಸ್ಸಾ (ಎಸ್ತೇರ. 2:7).


**ಮನೆ ಮಾರಾಟಕ್ಕಿದೆ**



**ಶಂಕರಪುರದ ದುರ್ಗನಗರದಲ್ಲಿ 1500 sq.ft. R.C.C ಮನೆ ಸಹಿತ 15 ಸೆಂಟ್ಸ್ ಜಾಗ ಮಾರಾಟಕ್ಕಿದೆ.**

**ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ :**

**08007853167, 09764630343.**


ನಿನ್ನನ್ನು ಉದ್ಧರಿಸಿ ರಕ್ಷಿಸಲು ನಾನೇ ನಿನ್ನೊಂದಿಗಿರುವೆನು. ಇದು ಯೆಹೋವನಾದ ನನ್ನ ಮಾತು (ಯೆರೆ. 15:20).